d)




10 ಹತ್ತುಗಳು ಮತ್ತು 6 ಒಂದುಗಳು

1 ನೂರುಗಳು + 0 ಹತ್ತುಗಳು + 6 ಒಂದುಗಳು = 106

ನೂರುಗಳು	ಹತ್ತುಗಳು	ಒಂದುಗಳು
1	0	6
1 0 6		


@KTBS NOT TO BE REPUBLISHED

e)



11 ಹತ್ತುಗಳು ಮತ್ತು 14 ಒಂದುಗಳು

f)



1 ನೂರು, 12 ಹತ್ತುಗಳು ಮತ್ತು 14 ಒಂದುಗಳು

____ನೂರು + ____ ಹತ್ತುಗಳು + _____ ಒಂದುಗಳು = ____

____ನೂರುಗಳು + ____ ಹತ್ತುಗಳು + _____ ಒಂದುಗಳು = ____


ನೂರುಗಳು	ಹತ್ತುಗಳು	ಒಂದುಗಳು

ನೂರುಗಳು	ಹತ್ತುಗಳು	ಒಂದುಗಳು

@KTBS NOT TO BE REPUBLISHED

ನಾವು ಬಿಡಿಸೋಣ


ಮುಂದಿನ ಪ್ರತಿಯೊಂದಕ್ಕೂ ಸಂಖ್ಯೆಗಳನ್ನು ಗುರ್ತಿಸಿ ಮತ್ತು ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ. ಅಗತ್ಯವಾದಲ್ಲಿ ಈ ರೀತಿಯ ಚಿತ್ರಗಳನ್ನು ರಚಿಸಿ.




a) 45 ಒಂದುಗಳು
b) 39 ಒಂದುಗಳು
c) 35 ಹತ್ತುಗಳು
d) 86 ಹತ್ತುಗಳು
e) 10 ಹತ್ತುಗಳು ಮತ್ತು 1 ಒಂದುಗಳು
f) 15 ಹತ್ತುಗಳು ಮತ್ತು 23 ಒಂದುಗಳು
g) 34 ಹತ್ತುಗಳು ಮತ್ತು 12 ಒಂದುಗಳು
h) 19 ಹತ್ತುಗಳು ಮತ್ತು 10 ಒಂದುಗಳು
i) 2 ನೂರುಗಳು, 13 ಹತ್ತುಗಳು ಮತ್ತು 7 ಒಂದುಗಳು

1000 (ಒಂದು ಸಾವಿರ) ನಂತರದ ಸಂಖ್ಯೆಗಳು

ಸಾವಿರಗಳು	ನೂರುಗಳು	ಹತ್ತುಗಳು	ಒಂದುಗಳು
1	0	0	0
1000			



ದೊಡ್ಡ ಸಂಖ್ಯೆಗಳಿಗೆ ಡೀನ್ ಬ್ಲಾಕ್‌ಗಳ ಜಾಗದಲ್ಲಿ ಟೋಕನ್‌ಗಳನ್ನು ಬಳಸುತ್ತೇವೆ.












@KTBS NOT TO BE REPUBLISHED

ಸಾವಿರಗಳು	ನೂರುಗಳು	ಹತ್ತುಗಳು	ಒಂದುಗಳು
1	0	0	1
1001			
ಒಂದು ಸಾವಿರದ ಒಂದು			

1 ಸಾವಿರ + 0 ನೂರು + 0 ಹತ್ತುಗಳು + 1 ಒಂದುಗಳು = 1001

ಮುಂದಿನ ಕೋಷ್ಟಕವನ್ನು ಗಮನಿಸಿ ಮತ್ತು ಖಾಲಿ ಜಾಗಗಳನ್ನು ತುಂಬಿ.

ಟೋಕನ್‌ಗಳು	ವಿಸ್ತರಿಸಿದ ರೂಪ	ಸಾವಿರಗಳು	ನೂರುಗಳು	ಹತ್ತುಗಳು	ಒಂದುಗಳು	ಸಂಖ್ಯೆ	ಸಂಖ್ಯೆ ಹೆಸರು
	1000 + 1					1001	
						1002	
						1003	
		1	0	0	5		
							
	1000 + 100					1100	ಒಂದು ಸಾವಿರಗಳು ಒಂದು ನೂರುಗಳು
						1038	
							
							
	3000 + 0 + 10 + 9						


@KTBS NOT TO BE REPUBLISHED

ಟೋಕನ್‌ಗಳು	ವಿಸ್ತರಿಸಿದ ರೂಪ	ಸಾವಿರಗಳು	ನೂರುಗಳು	ಹತ್ತುಗಳು	ಒಂದುಗಳು	ಸಂಖ್ಯೆ	ಸಂಖ್ಯೆ ಹೆಸರು
1000 100 100 10 1000 100 10 1000 10 100 100 1000 100 1 10 1000 1 1000 1 10 1 10 1 1							
1000 10 1000 10 10 1000 10 1000 10 10 1000 1000 10 1000 10 1000 10 1000							

@KTBS NOT TO BE REPUBLISHED

1. ಒಂದು ಶ್ರೇಣಿಯಲ್ಲಿ ಮುಂದಿನ ಮತ್ತು ಹಿಂದಿನ ಸಂಖ್ಯೆಗಳನ್ನು ಸೂಚಿಸಿರುವಂತೆ ಬರೆಯಿರಿ.

a)



b)



c)



							4892	4893

d)



						8002	8003

ನಾವು ಆಡೋಣ

ಸ್ಥಾನಬೆಲೆ ಜಾರು ಪಟ್ಟಿಯನ್ನು ಮಾಡಿ. ಮಕ್ಕಳು, ಸರದಿಯ ಪ್ರಕಾರ ಹೇಳಿದ ಸಂಖ್ಯೆಯನ್ನು ಹೆಚ್ಚಿಸಲು ಅಥವಾ ಇಳಿಸಲು ತಿಳಿಸಬಹುದು.


a) 1895 – ಸಂಖ್ಯೆಯನ್ನು 1 ಹೆಚ್ಚಿಸಿ

b) 2785 – ಸಂಖ್ಯೆಯನ್ನು 10 ಹೆಚ್ಚಿಸಿ

c) 3369 – ಸಂಖ್ಯೆಯನ್ನು 2 ಇಳಿಸಿ

d) 5648 – ಸಂಖ್ಯೆಯನ್ನು 10 ಇಳಿಸಿ

e) 6487 – ಸಂಖ್ಯೆಯನ್ನು 20 ಹೆಚ್ಚಿಸಿ



@KTBS NOT TO BE REPUBLISHED

ನಾವು ಆಲೋಚಿಸೋಣ

1. ರಾಮ್, 7 ಸಾವಿರ 0 ನೂರುಗಳು 2 ಹತ್ತುಗಳು 4 ಒಂದುಗಳನ್ನು 724 ಎಂದು ಬರೆದನು.
   ಇದು ಸರಿಯೇ? _____
   ಸರಿಯಾದ ಸಂಖ್ಯೆಯನ್ನು ಬರೆಯಿರಿ. _____
2. ರಿಚಾ, 5 ಸಾವಿರ 6 ನೂರುಗಳು 0 ಹತ್ತುಗಳು 3 ಬಿಡಿಗಳನ್ನು 563 ಎಂದು ಬರೆದಳು.
   ಇದು ಸರಿಯೇ? _____
   ಸರಿಯಾದ ಸಂಖ್ಯೆಯನ್ನು ಬರೆಯಿರಿ. _____


ಸಂಖ್ಯಾ ರೇಖೆ

1. ಮುಂದೆ ನೀಡಿರುವ ಸಂಖ್ಯೆಗಳಲ್ಲಿ ಯಾವ ಸಂಖ್ಯೆಗಳು 2226 ಮತ್ತು 3226 ರ ನಡುವೆ ಇರುತ್ತವೆ? ಸರಿಯಾದ ಉತ್ತರಗಳಿಗೆ ವೃತ್ತ ಹಾಕಿ.

   3316 3236 2236 2216 3126 3216

2. ಸೂಚನೆಯಂತೆ ಮಾಡಿ.

   a) ಒಂದು ಸಂಖ್ಯಾರೇಖೆಯ ಮೇಲೆ 1001 ಮತ್ತು 1038 ಗಳನ್ನು ಗುರ್ತಿಸಲಾಗಿದೆ. 1043, 1069 ಮತ್ತು 1084 ಗಳನ್ನು ಅದೇ ಸಂಖ್ಯಾರೇಖೆಯ ಮೇಲೆ ಗುರ್ತಿಸಲು ಪ್ರಯತ್ನಿಸಿ.




   b) ಮುಂದಿನ ಸಂಖ್ಯಾರೇಖೆಯಲ್ಲಿ ನೀಡಿರುವ ಸಂಖ್ಯೆಗಳನ್ನು ಗುರ್ತಿಸಿ.

   2025, 2080, 2175, 2245, 2295, 2310, 2390, 2430, 2460




   c) ಇಲ್ಲಿ ನೀಡಿರುವ ಸಂಖ್ಯೆಗಳನ್ನು ಮುಂದಿನ ಸಂಖ್ಯಾರೇಖೆಯ ಮೇಲೆ ಗುರ್ತಿಸಿ.

   5512, 5548, 5590, 5636, 5673, 5695



   d) ಇಲ್ಲಿ ನೀಡಿರುವ ಸಂಖ್ಯೆಗಳನ್ನು ಮುಂದಿನ ಸಂಖ್ಯಾರೇಖೆಯ ಮೇಲೆ ಗುರ್ತಿಸಿ.


   8679, 8990, 8923, 8763



ನಾವು ಆಡೋಣ

ವಿವಿಧ ಸಂಖ್ಯೆಗಳನ್ನು ಮಾಡಲು ಬಾಣದ ಕಾಡ್‌ಗಳನ್ನು (ಪುಸ್ತಕದ ಕೊನೆಯಲ್ಲಿ ನೀಡಿರುವ) ಉಪಯೋಗಿಸಿ. ತರಗತಿಯಲ್ಲಿನ ಮಕ್ಕಳು ಬಾಣದ ಕಾರ್ಡ್‌ಗಳನ್ನು ಉಪಯೋಗಿಸಿಕೊಂಡು ಸರದಿಯಲ್ಲಿ ಸಂಖ್ಯೆಯನ್ನು ನೀಡಲಿ. ಸಂಖ್ಯೆಯನ್ನು ಜೋರಾಗಿ ಓದಿ ಮತ್ತು ಅದನ್ನು ವಿಸ್ತರಿಸಿದ ರೂಪ ಮತ್ತು ಪದಗಳಲ್ಲಿ ಬರೆಯಿರಿ.

@KTBS NOT TO BE REPUBLISHED



ಸಂಖ್ಯೆ 3452 ನ್ನು 3000, 400, 50 ಮತ್ತು 2ರ ಕಾರ್ಡ್‌ಗಳನ್ನು ಉಪಯೋಗಿಸಿ ಮಾಡಲಾಗಿದೆ.
3452 ರ ವಿಸ್ತರಿಸಿದ ರೂಪ 3000 + 400 + 50 + 2
ಪದಗಳಲ್ಲಿ 3452, ಮೂರು ಸಾವಿರದ ನಾಲ್ಕು ನೂರ ಐವತ್ತೆರಡು.

4085 ನ್ನು ಮಾಡಲು ಯಾವ ಕಾಡ್‌ಗಳನ್ನು ಉಪಯೋಗಿಸಬೇಕು? ಅದನ್ನು ವಿಸ್ತರಿಸಿದ ರೂಪ ಮತ್ತು ಪದಗಳಲ್ಲಿ ಬರೆಯಿರಿ.

ನನ್ನನ್ನು ಕಂಡುಹಿಡಿಯಿರಿ! ಸಂಖ್ಯೆಗಳನ್ನು ಜೋರಾಗಿ ಓದಿ ಮತ್ತು ಅವುಗಳನ್ನು ಗ್ರಿಡ್‌ನಲ್ಲಿ ಗುರ್ತಿಸಿ.

1	2	3	4	8	0	3	9
5	7	2	0	2	5	7	6
2	5	7	6	0	3	8	7
1	6	1	9	2	2	2	2
0	5	0	1	0	1	1	1
1	3	0	1	2	1	1	1
9	4	8	3	6	1	1	1

1. ಸಂಖ್ಯೆ 3782
2. ಎರಡು ಸಾವಿರದ ಐದು ನೂರ ಎಪ್ಪತ್ತಾರು.
3. ಎಲ್ಲಾ ಅಂಕೆಗಳು ಒಂದೇ ಆಗಿರುವ 4–ಅಂಕಿ ಸಂಖ್ಯೆ.
4. ಈ ಕೋಷ್ಟಕದಲ್ಲಿನ ಅತೀ ಕಡಿಮ 4–ಅಂಕಿ ಸಂಖ್ಯೆ.
5. ಈ ಕೋಷ್ಟಕದಲ್ಲಿನ ಅತೀ ದೊಡ್ಡ 4–ಅಂಕಿ ಸಂಖ್ಯೆ.
6. 5000 ಕ್ಕಿಂತ ದೊಡ್ಡದಾದ ಮತ್ತು 5200 ಕ್ಕಿಂತ ಚಿಕ್ಕ ಸಂಖ್ಯೆ.
7. 5600 ಮತ್ತು 6300 ರ ನಡುವೆ ಇರುವ ಒಂದು ಸಂಖ್ಯೆ.
8. ಒಂದು ದಾಳದ ಮೇಲೆ ಇರುವ ಎಲ್ಲಾ ಅಂಕಿಗಳ 4–ಅಂಕಿ ಸಂಖ್ಯೆ.

© KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳು ಸೂಕ್ತವಾದ ಬಾಣದ ಕಾರ್ಡ್‌ಗಳನ್ನು ಉಪಯೋಗಿಸುವುದನ್ನು ಮತ್ತು ಅವುಗಳು ಒಂದರ ಮೇಲೊಂದು ಐಕ್ಯವಾಗುವುದನ್ನು ಖಚಿತಪಡಿಸಿಕೊಳ್ಳಿ. ಅವರು ವೈಯುಕ್ತಿಕ ಅಂಕಿಗಳನ್ನು ಆರಿಸಿಕೊಳ್ಳಬಾರದು ಆದರೆ ಸೂಕ್ತವಾದ ಸಾವಿರಗಳು, ನೂರುಗಳು, ಹತ್ತುಗಳು ಮತ್ತು ಒಂದುಗಳನ್ನು ಆರಿಸಿಕೊಳ್ಳಬಹುದು. ಭಾರತೀಯ ಸಂಖ್ಯಾ ಪದ್ಧತಿಯಲ್ಲಿ ಸಂಖ್ಯೆಯನ್ನು ಬರೆಯಲು ಸ್ಥಾನ ಸೂಚಕವಾಗಿ '0' ಯನ್ನು ಉಪಯೋಗಿಸುವುದನ್ನು ಗಮನಿಸಲು ತಿಳಿಸಿ.

ನಾವು ಬಿಡಿಸೋಣ

1. 1 ಗಳು, 10 ಗಳು, 100 ಗಳು ಮತ್ತು 1000 ಗಳ ಟೋಕನ್‌ಗಳನ್ನು ಬಳಸಿ ಸಂಖ್ಯೆಗಳನ್ನು ಗುರ್ತಿಸಿ ಮತ್ತು ಅವುಗಳನ್ನು ಕೋಷ್ಟಕದಲ್ಲಿ ಬರೆಯಿರಿ.
   a) 6 ಹತ್ತುಗಳು ಮತ್ತು 22 ಒಂದುಗಳು
   b) 4 ಹತ್ತುಗಳು ಮತ್ತ 12 ಒಂದುಗಳು
   c) 3 ನೂರುಗಳು, 14 ಹತ್ತುಗಳು ಮತ್ತು 8 ಒಂದುಗಳು
   d) 12 ನೂರುಗಳು, 18 ಹತ್ತುಗಳು ಮತ್ತು 2 ಒಂದುಗಳು
   e) 1 ಸಾವಿರ 5 ನೂರುಗಳು, 10 ಹತ್ತುಗಳು ಮತ್ತು 17 ಒಂದುಗಳು



	ಸಾವಿರ	ನೂರು	ಹತ್ತು	ಒಂದು	ಸಂಖ್ಯೆ
a	0	0	8	2	82
b					
c					
d					
e					

@KTBS NOT TO BE REPUBLISHED

2A. ದೊಡ್ಡ ಸಂಖ್ಯೆಗೆ ವೃತ್ತ ಹಾಕಿ.
30 ಅಥವಾ 300
6000 ಅಥವಾ 600
6000 ಅಥವಾ 3000

2B. ಚಿಕ್ಕ ಸಂಖ್ಯೆಗೆ ವೃತ್ತ ಹಾಕಿ.
2 ಒಂದುಗಳು ಅಥವಾ 2 ನೂರುಗಳು
5 ಹತ್ತುಗಳು ಅಥವಾ 2 ಸಾವಿರಗಳು
7 ಹತ್ತುಗಳು ಅಥವಾ 4 ನೂರುಗಳು


ಶಿಕ್ಷಕರಿಗೆ ಟಿಪ್ಪಣಿ: (1) ಎಷ್ಟೇ ದೊಡ್ಡದಾದ ಸಂಖ್ಯೆಯಾದರೂ ಅದನ್ನು ಬರೆಯಲು 0–9 ರವರೆಗಿನ ಹತ್ತು ಅಂಕಿಗಳನ್ನು ಮಾತ್ರ ಬಳಸುವ ಬಗ್ಗೆ ವಿದ್ಯಾರ್ಥಿಗಳ ಗಮನವನ್ನು ಸೆಳೆಯಿರಿ. ಅಲ್ಲದೇ ಸಂಖ್ಯೆಗಳನ್ನು ಓದುವ ಕ್ರಮದ ಬಗೆಗೂ ಅವರ ಗಮನ ಸೆಳೆಯಿರಿ – ಮೊದಲು ಸಾವಿರ, ನಂತರ ನೂರು, ನಂತರ ಹತ್ತುಗಳು ಮತ್ತು ಅಂತಿಮವಾಗಿ ಒಂದುಗಳು. (2ಎ ಮತ್ತು 2ಬಿ). ಈ ಅಭ್ಯಾಸವು ವಿದ್ಯಾರ್ಥಿಗಳು ಒಂದುಗಳ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದನ್ನು ಪರಿಶೀಲಿಸಲು ಇದೆ. 2 ನೂರುಗಳು ಯಾವಾಗಲೂ 2 ಹತ್ತುಗಳು ಅಥವಾ 2 ನೂರುಗಳು ಯಾವಾಗಲೂ 9 ಹತ್ತುಗಳಿಗಿಂತ ದೊಡ್ಡದಾಗಿರುತ್ತದೆ.

ಸಂಖ್ಯೆಗಳನ್ನು ಹೋಲಿಸುವುದು


ಜಸ್ಪ್ರೀತ್ ಮತ್ತು ಗುಲ್ಶಾಜ್ ಗುರುದ್ವಾರದಲ್ಲಿ ಪ್ರತಿ ತಿಂಗಳು ಉಪಯೋಗಿಸಿದ ತಟ್ಟೆಗಳ ಸಂಖ್ಯೆಯನ್ನು ದಾಖಲಿಸಲು ಸಹಾಯ ಮಾಡುತ್ತಾರೆ. ಅವರು ಯಾವ ತಿಂಗಳಿನಲ್ಲಿ ಹೆಚ್ಚಿನ ಸಂಖ್ಯೆಯ ತಟ್ಟೆಗಳನ್ನು ಉಪಯೋಗಿಸಲಾಗಿದೆ ಎಂಬುದನ್ನು ಗುರ್ತಿಸಲು < ಮತ್ತು > ಚಿನ್ಹೆಗಳನ್ನು ಉಪಯೋಗಿಸುತ್ತಾರೆ.



ಫೆಬ್ರವರಿ: 1213 ಮಾರ್ಚ್: 2121



ಸೆಪ್ಟೆಂಬರ್: _____ ಅಕ್ಟೋಬರ್: _____



ನವೆಂಬರ್: _____ ಡಿಸೆಂಬರ್: _____

< ಮತ್ತು > ಚಿನ್ಹೆಗಳನ್ನು ಉಪಯೋಗಿಸಿ, ಸಂಖ್ಯೆಗಳನ್ನು ಹೋಲಿಸಿ

3102 ಏಕೆ 3012 ಕ್ಕಿಂತ ದೊಡ್ಡದಾಗಿದೆ?

3012			
ಸಾ	ನೂ	ಹ	ಒಂ
3	0	1	2

3102			
ಸಾ	ನೂ	ಹ	ಒಂ
3	1	0	2

ಯಾವ ಸಂಖ್ಯೆ ದೊಡ್ಡದು ಎಂಬುದನ್ನು ಹೇಗೆ ನಿರ್ಧರಿಸಿದಿರಿ ಎಂಬುದನ್ನು ವಿವರಿಸಿ. ಯಾವ ಸ್ಥಾನ ಸಾ, ನೂ, ಹ, ಒಂದು ಎಂಬುದನ್ನು ನಿರ್ಧರಿಸಲು ನಿಮಗೆ ಸಹಾಯ ಮಾಡಿತು?

ನಾವು ಮಾಡೋಣ

1. ಮುಂದಿನ ಜೋಡಿ ಸಂಖ್ಯೆಗಳನ್ನು < ಮತ್ತು > ಉಪಯೋಗಿಸಿ ಹೋಲಿಸಿ. ಅವಶ್ಯಕತೆಯಿದ್ದರೆ ಸ್ಥಾನ ಸಾ, ನೂ, ಹ, ಒಂದುಗಳ ಕೋಷ್ಟಕವನ್ನು ಮಾಡಿ. ನಿಮ್ಮ ಆಲೋಚನೆಗಳನ್ನು ತರಗತಿಯಲ್ಲಿ ಹಂಚಿಕೊಳ್ಳಿ.

a) 2190 ☐ 2910


b) 7087 ☐ 7088

c) 1009 ☐ 9001

d) 982 ☐ 1024

© NCERT NOT TO BE REPUBLISHED

2. ಮುಂದಿನ ವಸ್ತುಗಳ ಬೆಲೆಗಳನ್ನು ಕ್ರಮವಾಗಿ ಅತ್ಯಂತ ಕಡಿಮೆಯಿಂದ ಹೆಚ್ಚಿಗೆ ಕ್ರಮಗೊಳಿಸಿ. (ಏರಿಕೆಯ ಕ್ರಮ)



₹ 1986



₹ 1099



₹ 1899

[ ] < [ ] < [ ]

3. ಮುಂದಿನ ಅಂತಾರಾಷ್ಟ್ರೀಯ ಮಹಿಳಾ ಕ್ರಿಕೆಟಿಗರು 200 ಏಕ ದಿನ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಅವರ ಸ್ಕೋರ್‌ಗಳನ್ನು ಮುಂದೆ ಪಟ್ಟಿಮಾಡಿದೆ. ಅವರ ಸ್ಕೋರ್‌ಗಳನ್ನು ಏರಿಕೆಯ ಕ್ರಮದಲ್ಲಿ ಜೋಡಿಸಿ. (ಕಡಿಮೆಯಿಂದ ಹೆಚ್ಚು)

ಡೆಬ್ಬಿ ಹಾಕ್ಲಿ	4064
ಸುಜ್ಜಿಬೇಟ್ಸ್	5114
ಕರೇನ್ ರೋಲ್ಟನ್	4814
ಮಿಥಾಲಿ ರಾಜ್	7805
ಚಾರ್ಲೊಟ್ಟೆ	6002

@KTBS NOT TO BE REPUBLISHED

4. ಮುಂದಿನ ಪರ್ವತ ಶ್ರೇಣಿಗಳನ್ನು ಅವುಗಳ ಎತ್ತರದ ಇಳಿಕೆಯ ಕ್ರಮದಲ್ಲಿ ಜೋಡಿಸಿ (ಹೆಚ್ಚು ಎತ್ತರದಿಂದ ಕಡಿಮೆ ಎತ್ತರದವರೆಗೆ).

ಪರ್ವತ ಶ್ರೇಣಿ	ಎತ್ತರ (ಮೀಟರ್‌ಗಳಲ್ಲಿ)
ಕಾಂಚನಜುಂಗಾ	8586
ಮುಳ್ಳಯ್ಯನಗಿರಿ	1930
ಚೌಕಾಂಬ I	7138
ಬೈಲದಿನ ಶ್ರೇಣಿ	1276
ನಂದಾದೇವಿ	7816
K2	8611
ಕಾಲ್ಸುಬಾಯ್	1646

5. ಮುಂದಿನವುಗಳನ್ನು ಹೋಲಿಸಲು <, =, > ಚಿನ್ಹೆಗಳನ್ನು ಉಪಯೋಗಿಸಿ.

a) 2 ಹತ್ತುಗಳು + 4 ಸಾವಿರಗಳು + 3 ನೂರುಗಳು

b) 2 ಹತ್ತುಗಳು + 4 ಸಾವಿರಗಳು + 3 ನೂರುಗಳು

c) 2 ಸಾವಿರಗಳು + 9 ನೂರುಗಳು + 9 ಹತ್ತುಗಳು + 0 ಒಂದುಗಳು

d) 15 ಒಂದುಗಳು + 9 ನೂರುಗಳು + 3 ನೂರುಗಳು

e) 5000 + 30 + 4

f) 5000 + 300 + 4

6. ನೀಡಿರುವ ನಿಬಂಧನೆಗಳನ್ನು ಪೂರೈಸುವಂತೆ 0–9 ರವರೆಗಿನ ಅಂಕಿಗಳನ್ನು ಉಪಯೋಗಿಸಿಕೊಂಡು ಖಾಲಿ ಸ್ಥಳಗಳನ್ನು ತುಂಬಿರಿ.

a) 7__ __3 < 768__

b) 853__ < 8__3__

c) __2__1 < 5__2__

© KTBS NOT TO BE REPUBLISHED

ಸವಾಲು

700 ಮತ್ತು 800 ನ್ನು ಹೊರತುಪಡಿಸಿ, 700 ಮತ್ತು 800 ರ ನಡುವೆ ನಿಖರವಾಗಿ 99 ಸಂಖ್ಯೆಗಳಿವೆ. 7000 ಮತ್ತು 8000 ನಡುವೆ ನಿಖರವಾಗಿ ಎಷ್ಟು ಸಂಖ್ಯೆಗಳಿವೆ?

ಸರಿ ಉತ್ತರಕ್ಕೆ ವೃತ್ತ ಹಾಕಿ:

900 999 1000

ನಾವು ಅನ್ವೇಷಿಸೋಣ

1. ಯಾವುದೇ ಅಂಕಿ ಪುನರಾವರ್ತನೆ ಆಗದಂತೆ 2, 3, 4, 7 ಗಳನ್ನು ಉಪಯೋಗಿಸಿಕೊಂಡು ಸಾಧ್ಯವಾದಷ್ಟು ನಾಲ್ಕು – ಅಂಕಿ ಸಂಖ್ಯೆಗಳನ್ನು ಮಾಡಿ. ಅಂತಹ 24 ವಿವಿಧ ಸಂಖ್ಯೆಗಳನ್ನು ಮಾಡಬಹುದು. ಸಾಧ್ಯವಾದಷ್ಟು ಸಂಖ್ಯೆಗಳನ್ನು ಮಾಡಿ, ಅವುಗಳನ್ನು ಇಳಿಕೆಯ ಕ್ರಮದಲ್ಲಿ ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ.
2. ನಿಮ್ಮ ಸ್ನೇಹಿತರು ಬೇರೆ ಯಾವ ಸಂಖ್ಯೆಗಳನ್ನು ಮಾಡಿದ್ದಾರೆ ಎಂಬುದನ್ನು ನಿಮ್ಮ ಸಂಖ್ಯೆಗಳೊಂದಿಗೆ ಹೋಲಿಸಿ. ನೀವೆಲ್ಲರೂ ಒಟ್ಟಾಗಿ 24 ಸಂಖ್ಯೆಗಳನ್ನು ಮಾಡಿರುವಿರಾ ಗಮನಿಸಿ. ಸಾಧ್ಯವಿರುವ ಅಂತಹ ಎಲ್ಲಾ ಸಂಖ್ಯೆಗಳು ಇವೆ ಎಂದು ನೀವು ಹೇಗೆ ತಿಳಿದುಕೊಂಡಿರಿ?

ಅಧ್ಯಾಯ
5

ಹಂಚಿಕೆ ಮತ್ತು ಅಳತೆ

M3R4W6



ಭಾಗಗಳು ಮತ್ತು ಪೂರ್ಣಗಳು


ಇಕ್ರ ಮತ್ತು ಅವಳ ಕಿರಿಯ ಸಹೋದರಿ ಸಮೀನ, ಒಂದು ರಚನೆಯನ್ನು ಮಾಡಲು ನಿರ್ಧರಿಸುತ್ತಾರೆ, ಆದರೆ ಅವರಲ್ಲಿ ಒಂದು ಡ್ರಾಯಿಂಗ್ ಹಾಳೆ ಮಾತ್ರ ಇದೆ. ಇಕ್ರ ಕಾಗದವನ್ನು ಅರ್ಧಭಾಗ ಮಾಡಿ ಅದನ್ನು ಹಂಚಿಕೊಳ್ಳಲು ಬಯಸುತ್ತಾಳೆ ಆದರೆ ಸಮೀನ ದೊಡ್ಡ ಭಾಗ ಬೇಕೆಂದು ಒತ್ತಾಯಿಸುತ್ತಾಳೆ. ಇಕ್ರ ಒಂದು ಘಳಿಗೆ ಯೋಚಿಸಿ ಒಂದು ಪರಿಹಾರವನ್ನು ಸೂಚಿಸಿದಳು.



ನೀನು ಅರ್ಧ ಕಾಗದದಲ್ಲಿ ಬರೆಯಲು ಬಯಸುವೆಯಾ ಅಥವಾ ಎರಡು ಕಾಲುಭಾಗಗಳಾ?

ಕಾಗದದ ಒಂದು ಅರ್ಧ ಚಿಕ್ಕದಾಗಿ ಕಾಣುತ್ತದೆ. ಆದರೆ ಎರಡು ಕಾಲುಭಾಗಗಳು ದೊಡ್ಡ ಭಾಗ ಎನಿಸುತ್ತದೆ. ನನಗೆ ಎರಡು ಕಾಲುಭಾಗಗಳು ಬೇಕು.





© KTBS NOT TO BE REPUBLISHED

ನಾವು ಚರ್ಚಿಸೋಣ


1. ನೀವು ಕಾಗದದ ಯಾವ ಭಾಗವನ್ನು ಆರಿಸಿಕೊಳ್ಳುತ್ತಿದ್ದೀರಿ – ಒಂದು ಅರ್ಧ ಅಥವಾ ಎರಡು ಕಾಲು ಭಾಗಗಳು? ಏಕೆ?
2. ಇಕ್ರ ಕಾಗದವನ್ನು ಸಮವಾಗಿ ಹಂಚಿದಳು ಎಂದು ಭಾವಿಸುವಿರಾ? ಏಕೆ? ಒಂದು ಕಾಗದದೊಂದಿಗೆ ಪ್ರಯತ್ನಿಸಿ.

3. ಕಾಗದವನ್ನು ಸಮವಾಗಿ ಭಾಗ ಮಾಡಲಾಗಿದೆ ಎಂದು ನೀವು ಹೇಗೆ ತಿಳಿದಿರಿ?

4. ಸಮೀನ ಕಾಗದದ ಎರಡು ಕಾಲುಭಾಗಗಳನ್ನು ಆಯ್ಕೆ ಮಾಡಿಕೊಂಡಳು ಎಂದು ನೀವು ಏಕೆ ಭಾವಿಸುವಿರಿ?


ನಾವು ಮಾಡೋಣ

1. ಸಮೀನ ಕೆಲವು ಚಿತ್ರಗಳನ್ನು ಎರಡು ಭಾಗಗಳಾಗಿ ವಿಭಾಗಿಸಿದ್ದಾಳೆ. ಚಿತ್ರಗಳನ್ನು ಎರಡು ಅರ್ಧಗಳಾಗಿ ವಿಭಾಗಿಸಿರವ ಚಿತ್ರಗಳಿಗೆ ಬಣ್ಣ ಹಾಕಿ. ಉತ್ತರವನ್ನು ಹೇಗೆ ಪಡೆದಿರಿ?



© KTBS NOT TO BE REPUBLISHED


2. ಒಂದು ಗೆರೆಯನ್ನು ಎಳೆಯುವುದರ ಮೂಲಕ ಆಕೃತಿಗಳನ್ನು ಎರಡು ಅರ್ಧಗಳಾಗಿ ವಿಭಾಗಿಸಿ.





ಒಂದು ವಸ್ತುವನ್ನು ಎರಡು ಸಮಭಾಗಗಳಾಗಿ ವಿಭಾಗಿಸಿದಾಗ, ಪ್ರತಿ ಭಾಗವನ್ನು ಅರ್ಧ ಎಂದು ಕರೆಯುತ್ತೇವೆ. ಇದನ್ನು $\frac{1}{2}$ ಎಂದು ಬರೆಯುತ್ತೇವೆ.

3. ಮುಂದಿನ ಆಕೃತಿಗಳನ್ನು 4 ಸಮ ಭಾಗಗಳಾಗಿ / ಕಾಲುಭಾಗಗಳಾಗಿ ವಿಭಾಗಿಸಿ.



ಒಂದು ವಸ್ತುವನ್ನು ನಾಲ್ಕು ಸಮಭಾಗಗಳಾಗಿ ವಿಭಾಗಿಸಿದಾಗ, ಪ್ರತಿ ಭಾಗವನ್ನು ಕಾಲು ಭಾಗ ಎಂದು ಕರೆಯಲಾಗುತ್ತದೆ. ಕಾಲು ಭಾಗವನ್ನು $\frac{1}{4}$ ಎಂದು ಬರೆಯುತ್ತೇವೆ.


ಯೋಚಿಸಿ: ಒಂದು ವಸ್ತುವನ್ನು 5 ಸಮ ಭಾಗಗಳಾಗಿ ವಿಭಾಗಿಸಿದಾಗ ಪ್ರತಿ ಭಾಗವನ್ನು ಒಂದು ಭಿನ್ನರಾಶಿಯಾಗಿ ಹೇಗೆ ಬರೆಯುತ್ತೇವೆ?




ಅರ್ಧ ಮತ್ತು ಕಾಲು ಭಾಗಗಳನ್ನಾಗಿ ಮಾಡಲು ಹಲವಾರು ವಿಧಾನಗಳು

ನಾವು ಪ್ರಯತ್ನಿಸೋಣ

1. ಒಂದು ಆಯತಾಕಾರದ ಕಾಗದವನ್ನು ಎಷ್ಟು ಬೇರೆ ಬೇರೆ ವಿಧಗಳಲ್ಲಿ ಮಡಚುವಿರಿ/ಕತ್ತರಿಸುವಿರಿ? ಅದನ್ನು ಆಯತಾಕಾರದ ಕಾಗದದೊಂದಿಗೆ ಪ್ರಯತ್ನಿಸಿ.






© KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಚಿನ್ಹೆಗಳನ್ನು ಉಪಯೋಗಿಸಿಕೊಂಡು ಭಿನ್ನರಾಶಿಗಳನ್ನು ಬರೆಯಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ, $\frac{1}{2}$ ಮತ್ತು $\frac{1}{4}$ ನಂತಹ ಉದಾಹರಣೆಗಳಿಂದ ಆರಂಭಿಸಿ. ಕಾಗದವನ್ನು ಮಡಚುವುದು ಮತ್ತು ಚಿತ್ರಗಳನ್ನು ರಚಿಸುವುದರ ಮೂಲಕ ಬೇರೆ ಭಿನ್ನರಾಶಿಗಳನ್ನು ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸಿ.

2. ಈಗ ಒಂದು ಆಯತವನ್ನು ನಾಲ್ಕು ಸಮಭಾಗಗಳಾಗಿ $\frac{1}{4}$ ಅಥವಾ ಕಾಲುಭಾಗ ವಿಭಾಗಿಸುವ ಐದು ವಿವಿಧ ಕ್ರಮಗಳನ್ನು ಕಾಗದವನ್ನು ಮಡಚುವ / ಕತ್ತರಿಸುವ ಮೂಲಕ ರಚಿಸಿ ಮತ್ತು ತೋರಿಸಲು ಪ್ರಯತ್ನಿಸಿ.


@KTBS NOT TO BE REPUBLISHED

3. ಮುಂದಿನ ಭಾಗಗಳನ್ನು ಅವುಗಳ ಪೂರ್ಣಗಳೊಂದಿಗೆ ಹೋಲಿಸಿ.



ಡಿಂಗ್ ಡಾಂಗ್ ಬೆಲ್

ಸುಮೇಧಾಳ ತಾಯಿ ರುಚಿಕರವಾದ ಡೋಕ್ಲಾ ಮಾಡಿದ್ದಾರೆ.



ನಿನ್ನ ಡೋಕ್ಲಾ ಇಲ್ಲಿದೆ. ನಿಮ್ಮಲ್ಲಿ ಇದನ್ನು ಸಮವಾಗಿ ಹಂಚಿಕೊಳ್ಳಿ.







ಡೋಕ್ಲಾವನ್ನು ಎರಡು ಸಮ ಭಾಗಗಳಾಗಿ ವಿಭಾಗಿಸಿದೆ. ಅರ್ಧ ನನಗೆ ಮತ್ತು ಅರ್ಧ ವಿನಾಯಕ್‌ಗೆ, ಇದು ಸರಿಯಾಗಿದೆ. ಅದರರ್ಥ 2 ಅರ್ಧಗಳು ಒಂದು ಪೂರ್ಣ ಡೋಕ್ಲಾವನ್ನು ಮಾಡುತ್ತವೆ.

@KTBS NOT TO BE REPUBLISHED

ಡಿಂಗ್ ಡಾಂಗ್! ಬಾಗಿಲ ಬೆಲ್ ರಿಂಗಣಿಸಿತು.






ಮಕ್ಕಳು ಡೋಕ್ಲಾವನ್ನು ಕುಮಾರ್ ಜೊತೆಗೂ ಹಂಚಿಕೊಂಡರು.



ನನ್ನ ಭಾಗ, ವಿನಾಯಕ್‌ನ ಭಾಗ ಮತ್ತು ಕುಮಾರ್‌ನ ಭಾಗ ಒಟ್ಟಾಗಿ ಒಂದು ಪೂರ್ಣ ಡೋಕ್ಲಾ ಆಗುತ್ತದೆ.

ಡಿಂಗ್ ಡಾಂಗ್! ಸುಮೇಧಾಳ ಸೋದರ ಸಂಬಂಧಿ ಪರಿಧಿ ಬರುತ್ತಾಳೆ.

ಬಾ, ಸ್ವಲ್ಪ ಡೋಕ್ಲಾ ತೆಗೆದುಕೊ.




ಡೋಕ್ಲಾವನ್ನು ನಾಲ್ಕು ಸಮಭಾಗಗಳಾಗಿ ವಿಭಾಗಿಸಲಾಯಿತು. ಪ್ರತಿಯೊಬ್ಬರಿಗೂ ಕಾಲು-ಭಾಗ ಡೋಕ್ಲಾ ದೊರೆಯಿತು.




ಡಿಂಗ್‌ಡಾಂಗ್! ಅವರ ನೆರೆಯ ಇಧಾ ಬರುತ್ತಾಳೆ, ಮನೆಯಲ್ಲಾ ಸಂತೋಷದಿಂದ ಸಂಭ್ರಮಿಸುತ್ತದೆ.


ಸುಸ್ವಾಗತ! ಸ್ವಲ್ಪ ಡೋಕ್ಲಾ ತೆಗೆದುಕೊ.



ಹೆಚ್ಚು ಭಾಗಗಳು!!! ಈಗ ಮತ್ತೂ ಸಣ್ಣ ಭಾಗ ನನಗೆ. ನನ್ನ ಇಷ್ಟದ ಡೋಕ್ಲಾದ ಕೇವಲ $\frac{1}{5}$ ನೇ ಭಾಗವನ್ನು ಪಡೆಯುತ್ತೇನೆ.



NOT TO BE REPUBLISHED @KTBS



ನಾವು ಚರ್ಚಿಸೋಣ.


1. ಪ್ರತಿ ಅತಿಥಿ ಬಂದಾಗ, ಸುಮೇಧಾ ತನ್ನ ಭಾಗದ ಬಗ್ಗೆ ಏನನ್ನು ಗಮನಿಸುತ್ತಿದ್ದಳು?
2. ಯಾವ ಸನ್ನಿವೇಶದಲ್ಲಿ ಸುಮೇಧಾ ತಿನ್ನಲು ಹೆಚ್ಚು **ಡೋಕ್ಲಾ** ಪಡೆಯುತ್ತಾಳೆ: 9 ಜನರೊಂದಿಗೆ ಅಥವಾ 11 ಜನರೊಂದಿಗೆ ಹಂಚಿಕೆಯಾದಾಗ?
3. $\frac{1}{6}$ ರ ಎಷ್ಟು ಭಾಗಗಳು ಒಂದು ಪೂರ್ಣ **ಡೋಕ್ಲಾ** ಮಾಡುತ್ತವೆ?
4. ಇಧಾ ಮತ್ತು ವಿನಾಯಕ್ ಇಬ್ಬರೂ **ಡೋಕ್ಲಾ**ದ ತಮ್ಮ ಪಾಲನ್ನು ಸುಮೇಧಾಗೆ ಕೊಟ್ಟರೆ, ಅವಳು ಎಷ್ಟು ಭಾಗ ಪಡೆಯುತ್ತಾಳೆ?

ನಾವು ಮಾಡೋಣ

1. **ಡೋಕ್ಲಾ**ವನ್ನು 6 ಜನರಿಗೆ ಸಮನಾಗಿ ಹಂಚಿದರೆ ಪ್ರತಿಯೊಬ್ಬರು ಎಷ್ಟು ಪಡೆಯುತ್ತಾರೆ? ಇದನ್ನು 8 ಜನರೊಂದಿಗೆ ಹಂಚಿ ಪ್ರಯತ್ನಿಸಿ. ಯಾರು **ಡೋಕ್ಲಾ**ದ ದೊಡ್ಡ ಭಾಗವನ್ನು ಪಡೆಯುತ್ತಾರೆ. ರಚಿಸಿ ಮತ್ತು ವಿವರಿಸಿ.

@KTBS NOT TO BE REPUBLISHED


2. ಕೊಟ್ಟಿರುವ ಸಂಖ್ಯೆಯಷ್ಟು ಜನರಿಗೆ ಡೋಕ್ಲಾವನ್ನು ಸಮವಾಗಿ ವಿಭಾಗಿಸಿದಾಗ, ಸುಮೇಧಾ ಪಡೆಯುವ ಭಾಗವನ್ನು ಶೇಡ್ ಮಾಡಿ. ಭಿನ್ನರಾಶಿಗಳು ಏಕೆ ಚಿಕ್ಕದಾಗುತ್ತವೆ ಎಂಬುದನ್ನು ಚರ್ಚಿಸಿ.



ನಾವು ಚರ್ಚಿಸೋಣ

ನಿಮ್ಮ ಪಠ್ಯಪುಸ್ತಕದ ಕೊನೆಯಲ್ಲಿ ನೀಡಿರುವ ಭಿನ್ನರಾಶಿ ಕಿಟ್ ಉಪಯೋಗಿಸಿ, ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ವಿವಿಧ ಭಾಗಗಳು ಮತ್ತು ಪೂರ್ಣದ ಬಗೆಗಿನ ನಿಮ್ಮ ವೀಕ್ಷಣೆಗಳನ್ನು ಹಂಚಿಕೊಳ್ಳಿ.
2. ಭಿನ್ನರಾಶಿ ಕಿಟ್‌ನ ಎರಡು ಬೇರೆ ಬೇರೆ ಭಾಗಗಳನ್ನು ತೆಗೆದುಕೊಂಡು ಅವುಗಳನ್ನು ಹೋಲಿಸಿ. ಯಾವುದು ಚಿಕ್ಕದು ಮತ್ತು ಏಕೆ ಎಂಬುದನ್ನು ಚರ್ಚಿಸಿ.
3. ಒಂದು ಪೂರ್ಣವನ್ನು ಸಮವಾಗಿ ಹೆಚ್ಚು ಭಾಗಗಳಾಗಿ ವಿಭಾಗಿಸಿದಾಗ, ಪ್ರತಿ ಭಾಗವು ಚಿಕ್ಕದಾಗುತ್ತದೆ ಎಂಬುದನ್ನು ಸುಮೇಧಾ ಗಮನಿಸಿದಳು. ನೀವು ಅದನ್ನು ಒಪ್ಪುವಿರಾ?
4. ಸುಮೇಧಾ ಹೇಳುತ್ತಾಳೆ, $\frac{1}{5}$ ಭಾಗದ 5 ಭಾಗಗಳನ್ನು ನಾನು ಸೇರಿಸಿದಾಗ ಒಂದು ಪೂರ್ಣ **ಡೋಕ್ಲಾ** ಆಗುತ್ತದೆ'. ನಿಮ್ಮ ಭಿನ್ನರಾಶಿ ಕಿಟ್ ಉಪಯೋಗಿಸಿ, ಇದನ್ನು ಮಾಡಲು ಪ್ರಯತ್ನಿಸಿ.
5. ಈ ಭಾಗವು ಪೂರ್ಣದ ಮೂರನೇ ಒಂದು ಎಂದು ಸುಮೇಧಾ ಹೇಳುತ್ತಾಳೆ. ಅವಳು ಏಕೆ ಹೀಗೆ ಹೇಳುತ್ತಿದ್ದಾಳೆ?



ಶಿಕ್ಷಕರಿಗೆ ಟಿಪ್ಪಣಿ: ಡೋಕ್ಲಾದ ಕಥೆಯನ್ನು ಒಂದು ವೃತ್ತಾಕಾರದ ಹಾಳೆಯನ್ನು ಉಪಯೋಗಿಸಿಕೊಂಡು ಹೆಚ್ಚು ಜನರಿಗೆ ಹಂಚಿದಾಗ ಪ್ರತಿಯೊಬ್ಬರಿಗೆ ದೊರೆಯುವ ಭಾಗ ಕಡಿಮೆಯಾಗುತ್ತದೆ ಎಂಬುದನ್ನು, ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಸಹಾಯ ಮಾಡಿ.

@KTBS NOT TO BE REPUBLISHED

ಖಾಲಿ ಜಾಗಗಳನ್ನು ಭರ್ತಿ ಮಾಡಲು ಪ್ರಯತ್ನಿಸೋಣ. ಎರಡೂ ಭಿನ್ನರಾಶಿಗಳು ಒಂದೇ ಪೂರ್ಣದ ಭಾಗಗಳು. ಅಗತ್ಯವಿದ್ದಲ್ಲಿ ನಿಮ್ಮ ಭಿನ್ನರಾಶಿ ಕಿಟ್ ಉಪಯೋಗಿಸಿ. ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

1. ($\frac{1}{5}$, $\frac{1}{4}$) ಇದರಲ್ಲಿ _____ ಗಿಂತ _____ದೊಡ್ಡದಾಗಿದೆ.
2. _____ > _____ ($\frac{1}{9}$, $\frac{1}{6}$).
3. $\frac{1}{6}$ ____ $\frac{1}{8}$.
4. _____ಇದು _____ಕ್ಕಿಂತ ಚಿಕ್ಕದಾಗಿದೆ _____ (____ , ____).

ನನ್ನ ಹೂ ತೋಟ


ಇದಾ ಬಳಿ 5 ವಿವಿಧ ಹೂವಿನ ಗಿಡಗಳ ಬೀಜಗಳು ಇವೆ - ಗುಲಾಬಿ, ದುಂಡು ಮಲ್ಲಿಗೆ (Mogra), ನೈದಿಲೆ (Lily), ಚೆಂಡು ಹೂವು (Marigold) ಮತ್ತು ಮಲ್ಲಿಗೆ (Jasmine). ಚಿತ್ರದಲ್ಲಿ ತೋರಿಸಿರುವಂತೆ, ತನ್ನ ತೋಟದಲ್ಲಿ ಅವುಗಳನ್ನು ಸಮವಾಗಿ ಬೆಳೆಸಲು ಅವಳು ಯೋಚಿಸುತ್ತಾಳೆ.



ಗುಲಾಬಿ ದುಂಡು ಮಲ್ಲಿಗೆ ನೈದಿಲೆ ಚೆಂಡು ಮಲ್ಲಿಗೆ

ನನ್ನ ಬಳಿ ಕೆಲವು ನೈದಿಲೆ ಬೀಜಗಳಿವೆ, ಹಾಗಾಗಿ ನಾನು ಗುಲಾಬಿಯನ್ನು ಎರಡು ಭಾಗಗಳಾಗಿ ಬೆಳೆಸುತ್ತೇನೆ.

ಅವಳ ಪರಿಷ್ಕೃತ ಯೋಜನೆ ಇಲ್ಲಿದೆ.



ತೋಟವನ್ನು ಗಮನಿಸಿ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

ದುಂಡು ಮಲ್ಲಿಗೆ ತೋಟದ $\frac{1}{5}$ ಅಥವಾ ಐದನೇ ಒಂದು ಭಾಗವಾಗಿದೆ.


ಚೆಂಡು ಹೂ ತೋಟದ _____ ಭಾಗವಾಗಿದೆ.

ಮಲ್ಲಿಗೆ ತೋಟದ _____ ಭಾಗವಾಗಿದೆ.

$\frac{1}{5}$ ಭಾಗ ಗುಲಾಬಿ ಮತ್ತು $\frac{1}{5}$ ಭಾಗ ಅಥವಾ ಒಟ್ಟು $\frac{2}{5}$ (ಐದನೇ–ಎರಡು) ತೋಟದ ಭಾಗವಾಗಿದೆ.

NOT TO BE REPUBLISHED

ತೋಟವನ್ನು ಗಮನಿಸಿ, ಪ್ರಶ್ನೆಗಳಿಗೆ ಉತ್ತರಿಸಿ.




ದುಂಡು ಮಲ್ಲಿಗೆ ತೋಟದ _____ ಭಾಗವಾಗಿದೆ.

ಚೆಂಡು ಹೂ ತೋಟದ _____ ಭಾಗವಾಗಿದೆ.

$\frac{1}{5} + \frac{1}{5} + \frac{1}{5}$ ಭಾಗದ ಗುಲಾಬಿ ಅಥವಾ ಒಟ್ಟು $\frac{3}{5}$ (ಐದನೇ–ಮೂರು) ಭಾಗವಾಗಿದೆ.

ತೋಟವನ್ನು ಗಮನಿಸಿ, ಪ್ರಶ್ನೆಗಳಿಗೆ ಉತ್ತರಿಸಿ.



ಚೆಂಡು ಹೂ ತೋಟದ _____ ಭಾಗವಾಗಿದೆ.

$\frac{1}{5} + \frac{1}{5} + \frac{1}{5} + \frac{1}{5}$ ಭಾಗದ ಗುಲಾಬಿ ಅಥವಾ ಒಟ್ಟು $\frac{4}{5}$ (ಐದನೇ – ನಾಲ್ಕು) ಭಾಗವಾಗಿದೆ.


ಗುಲಾಬಿ ಇಡೀ ತೋಟದ $\frac{5}{5}$ ಭಾಗವಾಗಿದೆ.



@KTBS NOT TO BE REPUBLISHED

ನಾವು ಮಾಡೋಣ

ಏಳು ಹೂವಿನ ಬೀಜಗಳಿಂದ ಒಂದು ಹೂ ತೋಟವನ್ನು ಮಾಡಿ – ದುಂಡು ಮಲ್ಲಿಗೆ, ಚೆಂಡು ಹೂ, ಮಲ್ಲಿಗೆ, ಗುಲಾಬಿ, ನೈದಿಲೆ, ದಾಸವಾಳ ಮತ್ತು ಕಣಗಿಲೆ (Periwinkle)


ಗುಲಾಬಿ

a) ಚೆಂಡು ಹೂ ಏಳನೇ ಒಂದು ($\frac{1}{7}$) ಮತ್ತು ಗುಲಾಬಿ ಹಾಗೂ ದಾಸವಾಳ ಏಳನೇ – ಮೂರು ($\frac{3}{7}$) ಭಾಗ.


ದುಂಡು ಮಲ್ಲಿಗೆ




ನೈದಿಲೆ

b) ನೈದಿಲೆ ಏಳನೇ ಮೂರು ($\frac{3}{7}$) ಭಾಗ, ಚೆಂಡು ಹೂ ಏಳನೇ ಎರಡು ($\frac{2}{7}$) ಭಾಗ ಮತ್ತು ಕಣಗಿಲೆ ಇನ್ನುಳಿದ ಏಳನೇ ಎರಡು ($\frac{2}{7}$).


ಚೆಂಡು



c) ದುಂಡು ಮಲ್ಲಿಗೆ ಏಳನೇ ಐದು ($\frac{5}{7}$) ಭಾಗ ಮತ್ತು ದಾಸವಾಳ ಏಳನೇ ಎರಡು ($\frac{2}{7}$) ಭಾಗ.


ಮಲ್ಲಿಗೆ




ಕಣಗಿಲೆ

@KTBS NOT TO BE REPUBLISHED

ಕನಸಿನ ದೋಸೆಯ ವಿನ್ಯಾಸಗಾರ


ಕರಣ್ ದೋಸೆಗಳನ್ನು ವಿಭಿನ್ನವಾಗಿ ಮಾಡುತ್ತಾರೆ. ಒಂದೇ ದೋಸೆಯ ಮೇಲೆ ವಿವಿಧ ಮೇಲೋಗರ (toppings) ಗಳನ್ನು ಉಪಯೋಗಿಸಿ, ಗ್ರಾಹಕರ ಆಯ್ಕೆಗೆ ಅನುಗುಣವಾಗಿ ದೋಸೆಗಳನ್ನು ಮಾಡುತ್ತಾರೆ. ಗ್ರಾಹಕರು ಮುಂದಿನವುಗಳಿಂದ ಮೇಲೋಗರಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

1. ಉತ್ಕೃಷ್ಟ ಆಲೂಗಡ್ಡೆ
2. ಮಸಾಲೆ ಭರಿತ ಈರುಳ್ಳಿ
3. ಚಿಲ್ಲಿ ಪನ್ನೀರ್
4. ಹುಳಿ ಟೊಮಾಟೊ

ಈ ವಿಶೇಷ ದೋಸೆಗಳನ್ನು ಮಾಡಲು ಕರಣ್‌ಗೆ ಸಹಾಯ ಮಾಡಿ.




ದೋಸೆಯ ಸ್ವಾದ	ದೋಸೆಯ ಭಾಗ
ಉತ್ಕೃಷ್ಟ ಆಲೂಗಡ್ಡೆ	$\frac{1}{4}$
ಮಸಾಲೆ ಭರಿತ ಈರುಳ್ಳಿ	$\frac{1}{4}$
ಚಿಲ್ಲಿ ಪನ್ನೀರ್	$\frac{1}{4}$
ಹುಳಿ ಟೊಮೊಟೊ	$\frac{1}{4}$



© KTBS NOT TO BE REPUBLISHED


ನೀವೇ ಮಾಡಿ

ಮುಂದಿನ ದೋಸೆಗಳಲ್ಲಿ ಪ್ರತಿ ಮೇಲೋಗರಗಳ ವಿಧಕ್ಕೆ ಭಿನ್ನರಾಶಿಗಳನ್ನು ಬರೆಯಿರಿ.



1) ಚಿಲ್ಲಿ ಪನ್ನೀರ್ =


2) ಉತ್ಕೃಷ್ಟ ಆಲೂಗಡ್ಡೆ =



1) ಹುಳಿ ಟೊಮೊಟೊ =

2) ಉತ್ಕೃಷ್ಟ ಆಲೂಗಡ್ಡೆ =

3) ಮಸಾಲೆ ಭರಿತ ಈರುಳ್ಳಿ=



1) ಮಸಾಲೆ ಭರಿತ ಈರುಳ್ಳಿ=

2) ಹುಳಿ ಟೊಮೊಟೊ =



1) ಹುಳಿ ಟೊಮೊಟೊ=

2) ಉತ್ಕೃಷ್ಟ ಆಲೂಗಡ್ಡೆ =

3) ಮಸಾಲೆ ಭರಿತ ಈರುಳ್ಳಿ=

ಈಗ ನೀವು ಬೇಡಿಕೆಗೆ ಅನುಗುಣವಾಗಿ ಬೇರೆ ಬೇರೆ ದೋಸೆಗಳನ್ನು ಮಾಡಬಹುದು.


$\frac{2}{3}$ ಭಾಗದ ಮೇಲೋಗರ ಮಸಾಲೆ ಈರುಳ್ಳಿ, $\frac{1}{3}$ ಭಾಗದ ಮೇಲೋಗರ ಉತ್ಕೃಷ್ಟ ದೋಸೆಯನ್ನು ಮಾಡಿ.

ಉತ್ಕೃಷ್ಟ ಆಲೂಗಡ್ಡೆ $\frac{3}{8}$ ಭಾಗ, ಚಿಲ್ಲಿ ಪನ್ನೀರ್ $\frac{1}{8}$ ಭಾಗ ಮತ್ತು $\frac{4}{8}$ ಭಾಗ ಹುಳಿ ಟೊಮಾಟೋ ಇರುವಂತೆ ದೋಸೆ ಮಾಡಿ.

©KTBS NOT TO BE REPUBLISHED

ನಾವು ಅನ್ವೇಷಿಸೋಣ


ಮೀನಾ ಬಳಿ 8 ದೀಪಗಳಿವೆ. ದೀಪಗಳ $\frac{1}{4}$ ಭಾಗಕ್ಕೆ ಕೆಂಪು ಬಣ್ಣ ಹಾಕಿ. $\frac{1}{4}$ ನ್ನು ಕಂಡುಹಿಡಿಯಲು, ದೀಪಗಳ ಸಂಖ್ಯೆಯನ್ನು 4 ಸಮ ಭಾಗಗಳಾಗಿ ವಿಭಾಗಿಸೋಣ. ದೀಪಗಳನ್ನು 4 ಸಮ ಭಾಗಗಳಾಗಿ ಹೇಗೆ ವಿಭಾಗಿಸಿದೆ ಎಂಬುದನ್ನು ಗಮನಿಸಿದಿರಾ? ಈಗ 2 ದೀಪಗಳಿಗೆ ಕೆಂಪು ಬಣ್ಣ ಹಾಕಿ.



ನಾವು ಮಾಡೋಣ


ಮುಂದೆ ನೀಡಿರುವ ಸನ್ನಿವೇಶಗಳಿಗೆ ಭಿನ್ನರಾಶಿಗಳನ್ನು ಕಂಡುಹಿಡಿಯಲು ಈಗ ಪ್ರಯತ್ನಿಸೋಣ. ಚಿತ್ರಗಳಲ್ಲಿ ಸೂಕ್ತ ಭಾಗಗಳಿಗೆ ವೃತ್ತ ಹಾಕಿ.

1. 12 ಬಿಸ್ಕತ್‌ಗಳಿವೆ. ಮಕ್ಕಳ ಸಂಖ್ಯೆ ಮುಂದಿನಂತಿದ್ದರೆ ಪ್ರತಿಯೊಬ್ಬರಿಗೂ ಎಷ್ಟು ಭಾಗ ದೊರೆಯುತ್ತದೆ?



   a) 3 ಮಕ್ಕಳು
   b) 6 ಮಕ್ಕಳು
   c) 2 ಮಕ್ಕಳು
   d) 4 ಮಕ್ಕಳು

2. ಸಿಮ್ರಾನ್ ತನ್ನ ಜನ್ಮದಿನದ ಆಚರಣೆಗೆ ಶಾಲಾ ಸ್ನೇಹಿತರನ್ನು ಕರೆಯುತ್ತಾಳೆ. ಅವಳ $\frac{1}{3}$ ಭಾಗದ ಸ್ನೇಹಿತರು ಹೇರ್‌ಬ್ಯಾಂಡ್ ಅನ್ನು ಕೊಡುಗೆಯಾಗಿ ಸ್ವೀಕರಿಸುತ್ತಾರೆ. ಹೇರ್‌ಬ್ಯಾಂಡ್‌ಗಳನ್ನು ಅವಳ $\frac{1}{3}$ ಭಾಗದ ಸ್ನೇಹಿತರ ಮೇಲೆ ಇಡಿ.





NOT TO BE REPUBLISHED @KTBS

3. ಕೊಟ್ಟಿರುವ ಸಂಖ್ಯೆಯ ಕುಂಡಗಳಲ್ಲಿ $\frac{1}{5}$ ಭಾಗ ಹೂಗಳನ್ನು ಚಿತ್ರಿಸಿ.



ನಮ್ಮ ಸುತ್ತಮುತ್ತಲಿನಲ್ಲಿ ಭಿನ್ನರಾಶಿಗಳನ್ನು ಕಂಡುಹಿಡಿಯೋಣ.

ದೈನಂದಿನ ಜೀವನದಲ್ಲಿ ಭಿನ್ನರಾಶಿಗಳನ್ನು ಎಲ್ಲಿ ಉಪಯೋಗಿಸುತ್ತೇವೆ ಎಂಬುದನ್ನು ತಿಳಿದುಕೊಳ್ಳಲು ಕದಂಬ ಉತ್ಸುಕಳಾಗಿದ್ದಾಳೆ. ಮುಂದಿನಂತೆ ಕೆಲವು ಉದಾಹರಣೆಗಳನ್ನು ಅವಳು ಕಂಡುಕೊಂಡಳು. ಇನ್ನೂ ಹೆಚ್ಚಿನ ಉದಾಹರಣೆಗಳನ್ನು ಕಂಡುಹಿಡಿಯಲು ಅವಳಿಗೆ ಸಹಾಯ ಮಾಡಿ ಮತ್ತು ಅವುಗಳ ಚಿತ್ರಗಳನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಲು ಪ್ರಯತ್ನಿಸಿ.

1. ನಿನ್ನೆ ಅಮ್ಮ ಒಂದು ಬಾಕ್ಸ್ **ಬರ್ಫಿ**ಯನ್ನು  ನಾಲ್ಕು ಸಮಭಾಗಗಳಾಗಿ ವಿಭಾಗಿಸಲು ತಿಳಿಸಿದರು. ಬಾಕ್ಸ್‌ನಲ್ಲಿ 16 **ಬರ್ಫಿ**ಗಳಿವೆ. 10 **ಬರ್ಫಿ**ಗಳ ಚಿತ್ರವನ್ನು ಬರೆಯಿರಿ ಮತ್ತು ಅವುಗಳ

   $\frac{1}{4}$ ಭಾಗವನ್ನು ಕಂಡುಹಿಡಿಯಿರಿ. ಪ್ರತಿ ಭಾಗದಲ್ಲಿ ಎಷ್ಟು **ಬರ್ಫಿ**ಗಳಿವೆ?

2. ತನ್ನ ನೋಟ್‌ಪುಸ್ತಕವನ್ನು ಅಲಂಕರಿಸಲು ರೋಹನ್ ಬಳಿ ಒಂದು ತುಂಡು ರಿಬ್ಬನ್ ಇದೆ. ಮೋಹನ್‌ನ ರಿಬ್ಬನ್, ರೋಹನ್‌ನ ರಿಬ್ಬನ್‌ಗಿಂತ ನಾಲ್ಕನೇ ಒಂದು ಭಾಗ ಉದ್ದವಿದೆ. ರೋಹನ್‌ನ ರಿಬ್ಬನ್ ಎಷ್ಟು ಉದ್ದವಿದೆ? ರಚಿಸಿ.

   ಮೋಹನ್‌ನ ರಿಬ್ಬನ್

© TBS NOT TO BE REPUBLISHED

ನೀವೇ ಪ್ರಯತ್ನಿಸಿ


ನಿಮ್ಮ ಸುತ್ತಮುತ್ತಲೂ ಗಮನಿಸಿ, ನಾವು ಭಿನ್ನರಾಶಿಗಳನ್ನು ಉಪಯೋಗಿಸುವ ಸನ್ನಿವೇಶಗಳ ಬಗ್ಗೆ ಯೋಚಿಸಿ. ಯಾವುದಾದರೂ ಎರಡು ಸನ್ನಿವೇಶಗಳನ್ನು ಮುಂದೆ ನೀಡಿರುವ ಜಾಗದಲ್ಲಿ ಬರೆಯಿರಿ.

1. _____
   _____
   _____


2. _____
   _____
   _____

ನಾವು ಮಾಡೋಣ


1. ಒಂದು ಆಯತಾಕಾರದ ಕಾಗದವನ್ನು ತೆಗೆದುಕೊಳ್ಳಿ. ಅದನ್ನು ಮೂರು ಸಮಭಾಗಗಳಾಗಿ ಮಡಚಿ ಮತ್ತು ಅದನ್ನು ತೆರೆಯಿರಿ.




2. ಚಿತ್ರದಲ್ಲಿ ತೋರಿಸಿರುವಂತೆ ಮೂರು ಸಮಭಾಗಗಳಲ್ಲಿ ಒಂದಕ್ಕೆ ಬಣ್ಣ ಹಚ್ಚಿ.




3. ಮೊದಲಿನಂತೆಯೇ ಕಾಗದವನ್ನು ಮೂರು ಸಮಭಾಗಗಳಾಗಿ ಮಡಚಿ, ನಂತರ ಅದನ್ನು ಅರ್ಧದಷ್ಟು ಮಡಚಿ.




4. ಬಣ್ಣ ಹಾಕಿರುವ ಭಾಗವನ್ನು ಗಮನಿಸಿ. ಶೇಡ್ ಮಾಡಿರುವ ಭಾಗದ ಭಿನ್ನರಾಶಿ ಯಾವುದು? ಇದರ ಅರ್ಥ ಏನು?



5. ಕಾಗದವನ್ನು ಪುನಃ ಮಡಚಿ ಮತ್ತು ಬಣ್ಣದ ಭಾಗ ಹೇಗೆ ಬದಲಾಗುತ್ತದೆ ಎಂಬುದನ್ನು ಪರಿಶೀಲಿಸಿ.



6. ಪ್ರತಿ ಮಡಿಕೆಯ ನಂತರ ನೀವು ಗಮನಿಸಿದ ಭಿನ್ನರಾಶಿಯನ್ನು ಬರೆಯಿರಿ.



$\frac{1}{3} = \frac{2}{6} =$ $\quad =$ $\quad =$

©KTBS NOT TO BE REPUBLISHED

ನಾವು ಪ್ರಯತ್ನಿಸೋಣ

ಮತ್ತೊಂದು ತುಂಡು ಕಾಗದವನ್ನು ತೆಗೆದುಕೊಂಡು ಅದನ್ನು ಎರಡು ಸಮಭಾಗಗಳಾಗಿ ಮಾಡುವುದರಿಂದ ಆರಂಭಿಸಿ ಮತ್ತು ಅದನ್ನು ಪ್ರತಿ ಬಾರಿ ಅರ್ಧ ಭಾಗ ಮಾಡಿ. ನೀವು ಕಂಡುಕೊಂಡ ಅಂಶಗಳನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ.

$\frac{1}{2} = \frac{2}{4} =$ _____ = _____ = _____

ನಾವು ಚರ್ಚಿಸೋಣ

ಭಿನ್ನರಾಶಿ ಕೋಷ್ಟಕವನ್ನು ಗಮನಿಸಿ ಮತ್ತು ಮುಂದಿನ ಪ್ರಶ್ನೆಗಳನ್ನು ಚರ್ಚಿಸಿ. ಉತ್ತರಗಳನ್ನು ಕಂಡುಹಿಡಿಯಲು ನೀವು ಭಿನ್ನರಾಶಿ ಕಿಟ್ ಸಹ ಉಪಯೋಗಿಸಬಹುದು.

1. $\frac{1}{4}$ರ ಎಷ್ಟು ಭಾಗಗಳು $\frac{1}{2}$ ಕ್ಕೆ ಸಮ?

   _____

2. $\frac{2}{3}$ ಇದು $\frac{1}{2}$ ಕ್ಕಿಂತ ಚಿಕ್ಕದಾಗಿದೆಯೇ ಅಥವಾ ದೊಡ್ಡದಾಗಿದೆಯೆ?

   _____

3. $\frac{1}{10}$ ರ ಹತ್ತು ತುಂಡುಗಳು ಒಂದು ಪೂರ್ಣವನ್ನು ಮಾಡುತ್ತವೆ. ಈ ಹೇಳಿಕೆ ಸರಿಯೇ?

   _____

4. $\frac{1}{6}$ರ ಮೂರು ಭಾಗಗಳು $\frac{1}{8}$ರ ಎರಡು ಭಾಗಗಳಿಗೆ ಸಮ. ಇದು ಸತ್ಯವೇ?

   _____

5. $\frac{1}{8}$ರ ಎಷ್ಟು ತುಂಡುಗಳು $\frac{1}{4}$ನ್ನು ಮಾಡುತ್ತವೆ?

   _____


6. ಮತ್ತೊಂದು ದೊಡ್ಡ ಭಾಗವನ್ನು ಮಾಡಲು, ಒಟ್ಟಾಗಿ ಸೇರಿಸಬಹುದಾದ ತುಂಡುಗಳನ್ನು ಕಂಡುಹಿಡಿಯಿರಿ.

1									
$\frac{1}{2}$	$\frac{1}{2}$								
$\frac{1}{3}$	$\frac{1}{3}$	$\frac{1}{3}$							
$\frac{1}{4}$	$\frac{1}{4}$	$\frac{1}{4}$	$\frac{1}{4}$						
$\frac{1}{5}$	$\frac{1}{5}$	$\frac{1}{5}$	$\frac{1}{5}$	$\frac{1}{5}$					
$\frac{1}{6}$	$\frac{1}{6}$	$\frac{1}{6}$	$\frac{1}{6}$	$\frac{1}{6}$	$\frac{1}{6}$				
$\frac{1}{7}$	$\frac{1}{7}$	$\frac{1}{7}$	$\frac{1}{7}$	$\frac{1}{7}$	$\frac{1}{7}$	$\frac{1}{7}$			
$\frac{1}{8}$	$\frac{1}{8}$	$\frac{1}{8}$	$\frac{1}{8}$	$\frac{1}{8}$	$\frac{1}{8}$	$\frac{1}{8}$	$\frac{1}{8}$		
$\frac{1}{9}$	$\frac{1}{9}$	$\frac{1}{9}$	$\frac{1}{9}$	$\frac{1}{9}$	$\frac{1}{9}$	$\frac{1}{9}$	$\frac{1}{9}$	$\frac{1}{9}$	
$\frac{1}{10}$	$\frac{1}{10}$	$\frac{1}{10}$	$\frac{1}{10}$	$\frac{1}{10}$	$\frac{1}{10}$	$\frac{1}{10}$	$\frac{1}{10}$	$\frac{1}{10}$	$\frac{1}{10}$


@KTBS NOT TO BE REPUBLISHED

ನಾವು ಮಾಡೋಣ

1. ಚೌಕಾಕಾರದ ಆಕೃತಿಗಳೊಂದಿಗೆ ಬಬ್ಲು ಆಡುತ್ತಿದ್ದಾನೆ. ಅವನು ಪ್ರತಿ ಭಾಗವನ್ನು ಸಮಗಾತ್ರದಲ್ಲಿರುವಂತೆ ಕತ್ತರಿಸಲು ಬಯಸುತ್ತಾನೆ. ಸಮ ಭಾಗಗಳಾಗಿ ಕತ್ತರಿಸಿರುವ ಚೌಕಗಳಿಗೆ ವೃತ್ತ ಹಾಕಿ. ಸಾಧ್ಯವಿರುವ ಕಡೆಗಳಲ್ಲಿ, ಶೇಡ್ ಮಾಡಿದ ಪ್ರತಿ ಭಾಗಕ್ಕೆ ಭಿನ್ನರಾಶಿಯನ್ನು ಬರೆಯಿರಿ.



2. ಶೇಡ್ ಮಾಡಿರುವ ಪ್ರತಿ ಭಾಗದ ಚಿತ್ರವು ಮಕ್ಕಳು ತಾವು ಹೇಳಿದ್ದು ಸರಿ ಇದೆಯೇ ಎಂಬುದನ್ನು ಪರಿಶೀಲಿಸಿ. ನೀವು ಸರಿ ಎಂದು ಭಾವಿಸುವುದಕ್ಕೆ ವೃತ್ತವನ್ನು ಹಾಕಿ, ತಪ್ಪಾಗಿರುವುದಕ್ಕೆ ಅಡ್ಡಗೆರೆ ಎಳೆಯಿರಿ. ಭಾಗಗಳನ್ನು ಸಮಭಾಗಗಳಾಗಿ ಮಾಡಲು ನೀವು ಹೆಚ್ಚುವರಿ ಗೆರೆಗಳನ್ನು ಎಳೆಯಬಹುದು. ನಿಮ್ಮ ಆಲೋಚನೆಯನ್ನು ಚರ್ಚಿಸಿ.



@KTBS NOT TO BE REPUBLISHED

ಅಮೀನ ಹೇಳುತ್ತಾಳೆ: $\frac{1}{3}$

ಕಿಶೋರ್ ಹೇಳುತ್ತಾನೆ: $\frac{1}{4}$


ಪೆರ್ಲಿ ಹೇಳುತ್ತಾನೆ: $\frac{1}{6}$

ಕುಂಜ್ ಹೇಳುತ್ತಾನೆ: $\frac{1}{3}$


ಬಾಲು ಹೇಳುತ್ತಾನೆ: $\frac{1}{5}$

ಗೀತಾ ಹೇಳುತ್ತಾಳೆ: $\frac{1}{4}$

3. ಕೊಟ್ಟಿರುವ ಚಿತ್ರಗಳಲ್ಲಿ ಬಣ್ಣ ಹಾಕಿರುವ ಭಾಗಗಳು ಪ್ರತಿನಿಧಿಸುವ ಭಿನ್ನರಾಶಿಗಳನ್ನು ಗುರ್ತಿಸಿ.



4. ಮುಂದೆ ನೀಡಿರುವ ಪ್ರತಿ ಚಿತ್ರದಲ್ಲಿ ನೀಲಿ ಭಾಗಗಳು ಉಂಟು ಮಾಡುವ ಪೂರ್ಣಭಾಗದ ಭಿನ್ನರಾಶಿಗಳನ್ನು ಗುರ್ತಿಸಿ.



@KTBS NOT TO BE REPUBLISHED

5. ಮುಂದಿನವುಗಳನ್ನು ಸಮಭಾಗಗಳಾಗಿ ವಿಭಾಗಿಸಿ ಮತ್ತು ಪ್ರತಿ ಸೂಕ್ತ ಭಾಗವನ್ನು ಶೇಡ್ ಮಾಡಿ.

$\frac{2}{3}$ ಭಾಗ ಶೇಡ್ ಮಾಡಿ	$\frac{4}{6}$ ಭಾಗ ಶೇಡ್ ಮಾಡಿ	$\frac{1}{4}$ ಭಾಗ ಶೇಡ್ ಮಾಡಿ ನೀವು $\frac{1}{8}$ ನ್ನೂ ತೋರಿಸಬಲ್ಲಿರ?	$\frac{3}{4}$ ಭಾಗ ಶೇಡ್ ಮಾಡಿ


ಅಧ್ಯಾಯ
6

ಉದ್ದವನ್ನು ಅಳೆಯುವುದು

Y5K5K2



ನಾವು ಗಮನಿಸೋಣ



© KTBS NOT TO BE REPUBLISHED

1. ಚಿತ್ರವನ್ನು ಗಮನಿಸಿ. ವಿದ್ಯಾರ್ಥಿಗಳು ಏನನ್ನು ಅಳತೆ ಮಾಡುತ್ತಿದ್ದಾರೆ? ಅವರು ಅಳತೆ ಮಾಡುತ್ತಿರುವುದನ್ನು ನೀವು ಕಂಡುಹಿಡಿದರೆ ಅದಕ್ಕೆ (✓) ಮಾರ್ಕ್ ಹಾಕಿ.

   a) ಉದ್ದ ☐ b) ತೂಕ ☐ c) ಅಗಲ ☐

   d) ಆಳ ☐ e) ಅಗಲ ☐ f) ತೂಕ ☐

2. ಎತ್ತರವನ್ನು ಅಳೆಯಲು ಏನನ್ನು ಉಪಯೋಗಿಸಿದೆ? ಎತ್ತರವನ್ನು ಅಳೆಯಲು ಬೇರೆ ಯಾವ ಸಾಧನಗಳನ್ನು ಬಳಸಬಹುದು?

3. 3 ನೇ ತರಗತಿಯಲ್ಲಿ ಉದ್ದಗಳನ್ನು ಮೀಟರ್‌ಗಳಲ್ಲಿ ಅಳೆಯುತ್ತಾರೆ ಎಂಬುದನ್ನು ಅಭ್ಯಸಿಸಿರುವುದನ್ನು ನೆನಪಿಸಿಕೊಳ್ಳಿ. ನಿಮ್ಮ ತರಗತಿಗೆ ಸಂಬಂಧಿಸಿದಂತೆ, ಮುಂದಿನವುಗಳು ಸರಿಯೇ/ತಪ್ಪೇ ಎಂಬುದನ್ನು ಪರಿಶೀಲಿಸಿ ಖಾಲಿ ಜಾಗಗಳನ್ನು ಭರ್ತಿ ಮಾಡಿ.

   a) ನನ್ನ ತರಗತಿಯಲ್ಲಿ ಬಹುತೇಕ ವಿದ್ಯಾರ್ಥಿಗಳ ಎತ್ತರಗಳು ಒಂದು ಮೀಟರ್‌ಗಿಂತ ಹೆಚ್ಚಾಗಿದೆ. _____

   b) ನನ್ನ ತೋಳಿನ ಉದ್ದ ಒಂದು ಮೀಟರ್‌ಗಿಂತ ಕಡಿಮೆ ಇದೆ. _____


   c) ತರಗತಿಯ ಬಾಗಿಲಿನ ಎತ್ತರ ಒಂದು ಮೀಟರ್‌ಗಿಂತ ಕಡಿಮೆ ಇದೆ. _____

   d) ಕಪ್ಪು ಹಲಗೆಯ ಅಗಲ ಒಂದು ಮೀಟರ್‌ಗಿಂತ ಹೆಚ್ಚು ಇದೆ. _____

ಶಿಕ್ಷಕರಿಗೆ ಟಿಪ್ಪಣಿ: ಎತ್ತರ, ಅಗಲ ಕಡಿಮೆ ಮತ್ತು ಉದ್ದ ಇವುಗಳನ್ನು ನಿಜ ಜೀವನದಲ್ಲಿ ಉಪಯೋಗಿಸುತ್ತೇವೆ. ವಿದ್ಯಾರ್ಥಿಗಳೊಂದಿಗೆ, ಎತ್ತರ, ಅಗಲ, ಆಳ ಇವುಗಳೆಲ್ಲಾ ಉದ್ದದ ಅಳತೆಗೆ ಸಂಬಂಧಿಸಿದೆ ಎಂಬುದನ್ನು ಚರ್ಚಿಸಿ. ವಿವಿಧ ಸನ್ನಿವೇಶಗಳು ಮತ್ತು ನಿಲುವು (Orientation)ಗಳಿಗನುಗುಣವಾಗಿ ಈ ಪದಗಳನ್ನು ಬಳಸುತ್ತೇವೆ. ಈ ಹಂತದಲ್ಲಿ ಮಕ್ಕಳು ಈ ಎಲ್ಲಾ ಪದಗಳು ಉದ್ದವನ್ನು ಸೂಚಿಸುತ್ತವೆ ಎಂಬುದನ್ನು ಅರ್ಥ ಮಾಡಿಕೊಂಡರೆ ಸಾಕು.

ಅಳತೆ ಮಾಡುವುದು ಮೋಜು

ನಾವು ಮಾಡಿರುವ 1 ಮೀಟರ್ (m), ಅರ್ಧಮೀಟರ್ ($\frac{1}{2}$), ಮತ್ತು ಕಾಲು ಮೀಟರ್ ($\frac{1}{4}$) ಹಗ್ಗಗಳನ್ನು ನೆನಪಿಸಿಕೊಳ್ಳಿ. ಅವುಗಳನ್ನು ಪುನಃ ಮಾಡೋಣ.



$1\text{ m} = \frac{1}{2}\text{ m} + \frac{1}{2}\text{ m}$ ಮತ್ತು $1\text{ m} = \frac{1}{4}\text{ m} + \frac{1}{4} + \frac{1}{4}\text{ m} + \frac{1}{4}\text{ m}$ ಮತ್ತು $\frac{1}{2}\text{ m} = \frac{1}{4}\text{ m} + \frac{1}{4}\text{ m}$. ಎಂಬುದನ್ನು ಗಮನಿಸಿದಿರಾ?

ನಾವು ಮಾಡೋಣ

ಮುಂದಿನ ಚಟುವಟಿಕೆಗಳನ್ನು ಮಾಡಲು ಹಗ್ಗಗಳನ್ನು ಉಪಯೋಗಿಸಿ, ಅಗತ್ಯವಿದ್ದಲ್ಲಿ ನೀವು ಹಗ್ಗಗಳ ಸಂಯೋಜನೆಯನ್ನು ಬಳಸಿಕೊಳ್ಳಬಹುದು.

1. 1.5 ಮತ್ತು 10 ಮೀಟರ್ ಗೆರೆಯ ಮೇಲೆ ನಡೆಯಿರಿ, ಜಿಗಿಯಿರಿ ಮತ್ತು ತೆವಳಿರಿ

ತರಗತಿಯ ನೆಲ ಅಥವಾ ಹೊರಗೆ ಆಟದ ಮೈದಾನದಲ್ಲಿ 1 m, 5 m ಮತ್ತು 10 m ಗೆರೆಗಳನ್ನು ಎಳೆಯಿರಿ.

ಈ ಗೆರೆಗಳನ್ನು ಹೇಗೆ ಎಳೆದಿರಿ? ಯೋಚಿಸಿ ಮತ್ತು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ, ಈ ಗೆರೆಗಳ ಮೇಲೆ ನಡೆಯಿರಿ ಮತ್ತು ತೆವಳಿರಿ.


ಶಿಕ್ಷಕರಿಗೆ ಟಿಪ್ಪಣಿ: ಮೀಟರ್ ಹಗ್ಗವನ್ನು ಪುನರಾವರ್ತಿತವಾಗಿ ಉಪಯೋಗಿಸಿ, ಈ ಗೆರೆಗಳನ್ನು ಮಾಡುವುದು ಮತ್ತು ಈ ಗೆರೆಗಳ ಮೇಲೆ ನಡೆಯುವುದು, ಜಿಗಿಯುವುದು ಮತ್ತು ತೆವಳುವುದು 5 m ಮತ್ತು 10 m ಎಷ್ಟು ದೊಡ್ಡದಿದೆ ಎಂಬುದರ ಕಲ್ಪನೆಯನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ. ಅವರು ಈ ಅನುಭವವನ್ನು ಉಪಯೋಗಿಸಿಕೊಂಡು, ತಮ್ಮ ಸುತ್ತಮುತ್ತಲಿನಲ್ಲಿ ಇತರೆ ಉದ್ದಗಳನ್ನು ಅಂದಾಜಿಸುವುದು ಮತ್ತು ಹೋಲಿಸುವುದನ್ನು ಮಾಡಲು ಸಮರ್ಥರಾಗಿರುತ್ತಾರೆ.

© KTBS NOT TO BE REPUBLISHED

2. ಉದ್ದ ಜಿಗಿತ

ಉದ್ದ ಜಿಗಿತದ ಸ್ಪರ್ಧೆಯಲ್ಲಿ ಪ್ರತಿ ಮಗು ಭಾಗವಹಿಸಬಹುದು. ನಿಮ್ಮ ಸ್ನೇಹಿತರು ಎಷ್ಟು ಉದ್ದ ಜಿಗಿದಿದ್ದಾರೆ? ಹಗ್ಗಗಳ ಸಂಯೋಜನೆಯನ್ನು ಉಪಯೋಗಿಸಿಕೊಂಡು ಅದನ್ನು ಸಾಧ್ಯವಾದಷ್ಟು ನಿಖರವಾಗಿ ಅಳೆಯಿರಿ. ಯಾರು ಅತಿ ಹೆಚ್ಚು ಉದ್ದ ಜಿಗಿದಿದ್ದಾರೆ?


ಮುಂದಿನ ಕೋಷ್ಟಕವನ್ನು ತುಂಬಿ.



ವಿದ್ಯಾರ್ಥಿಯ ಹೆಸರು	ಅಂದಾಜಿಸಿದ ಜಿಗಿತದ ಉದ್ದ			ನೈಜವಾದ ಅಳತೆ
	1 m ಗಿಂತ ಕಡಿಮೆ	1 m	1 m ಗಿಂತ ಹೆಚ್ಚು	


@KTBS NOT TO BE REPUBLISHED

3. ನಿಮ್ಮ ತರಗತಿ ಕೊಠಡಿ ಎಷ್ಟು ಉದ್ದ ಮತ್ತು ಅಗಲವಿದೆ ಅಂದಾಜಿಸಿ ಅಳತೆ ಮಾಡಿ ಪರಿಶೀಲಿಸಿ.





ಶಿಕ್ಷಕರಿಗೆ ಟಿಪ್ಪಣಿ: ತಮ್ಮ ಹೆಜ್ಜೆಗಳನ್ನು ಉಪಯೋಗಿಸಿ 100 m ಅಳತೆ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಿ ಮತ್ತು 100 m ಗೆ ಎಷ್ಟು ಹೆಜ್ಜೆಗಳಾಗುತ್ತವೆ ಎಂಬುದನ್ನು ಗುರುತು ಮಾಡಿಕೊಳ್ಳಲಿ. ಇದನ್ನು ಮುಂದೆ ಅಂದಾಜುಗಳಿಗೆ ಬಳಸಬಹುದು.

ನಾವು ಯೋಚಿಸೋಣ: ಉದ್ದವನ್ನು ಊಹಿಸಿ




ಉದ್ದ ಸುಮಾರು 30 ಮೀಟರ್‌ಗಳು









ಉದ್ದ ಸುಮಾರು 6 ಮೀಟರ್‌ಗಳು

@KTBS
NOT TO BE REPUBLISHED

ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಮೀಟರ್‌ಗಳಲ್ಲಿ ಒಂದು ಬಸ್‌ನ ಉದ್ದ ಎಷ್ಟು? ಒಂದು ಕ್ರಿಕೆಟ್ ಬ್ಯಾಟ್‌ನ ಉದ್ದ ಮೀಟರ್‌ಗಳಲ್ಲಿ ಎಷ್ಟು?
2. ಎರಡು ನೀಲಿ ತಿಮಿಂಗಿಲಗಳ ಉದ್ದಕ್ಕೆ ಎಷ್ಟು ಬಸ್‌ಗಳ ಉದ್ದ ಸಮವಾಗುತ್ತದೆ?
3. ಒಂದು ತಿಮಿಂಗಿಲವನ್ನು ಅಳೆಯಲು ಎಷ್ಟು ಕ್ರಿಕೆಟ್ ಬ್ಯಾಟ್‌ಗಳ ಅವಶ್ಯಕತೆಯಿದೆ?
4. ಎರಡು ಉಷ್ಣಪಕ್ಷಿ (ostrich) ಗಳು ಒಂದರ ಮೇಲೊಂದು ನಿಂತರೆ, ಅವುಗಳ ಎತ್ತರವು _____ದ ಎತ್ತರಕ್ಕೆ ಸಮನಾಗಿರುತ್ತದೆ
5. ಒಂದು ನೀಲಿ ತಿಮಿಂಗಿಲದ ಉದ್ದಕ್ಕೆ ಎಷ್ಟು ಮೊಸಳೆಗಳ ಉದ್ದ ಸಮವಾಗುತ್ತದೆ?

ಚಿಕ್ಕ ವಸ್ತುಗಳನ್ನು ಅಳತೆ ಮಾಡುವುದು

1 cm



ಒಂದು ಚಿಕ್ಕ ವಸ್ತು ಎರೇಸರ್ ಅಥವಾ ಅಕ್ಕಿ ಕಾಳಿನ ಉದ್ದವನ್ನು ಹೇಗೆ ಅಳೆಯುವುದು ಎಂಬುದನ್ನು ಯೋಚಿಸಬಲ್ಲಿರಾ?

ಅಂತಹ ಚಿಕ್ಕ ವಸ್ತುಗಳನ್ನು ಅಳೆಯಲು ನಮಗೆ ಚಿಕ್ಕ ಮಾನದ ಅಗತ್ಯತೆಯಿದೆ. ಒಂದು ಮೀಟರ್ ಪಟ್ಟಿಯನ್ನು ಗಮನಿಸಿ. ಆ ಪಟ್ಟಿಯನ್ನು 100 ಸಮ ಭಾಗಗಳಾಗಿ ವಿಭಾಗಿಸಿರುವುದನ್ನು ನೀವು ಗಮನಿಸುವಿರಿ.



ಈ ಪ್ರತಿ ಚಿಕ್ಕ ಭಾಗದ ಉದ್ದಕ್ಕೆ ವಿಶೇಷ ಹೆಸರಿದ್ದು ಅದನ್ನು **ಸೆಂಟಿ ಮೀಟರ್ (cm)** ಎಂದು ಕರೆಯಲಾಗುತ್ತದೆ.

ನಾವು ಗಮನಿಸೋಣ:




ಚುಟ್ಕಿ ತನ್ನ ಗಿಡದ ಎತ್ತರದಲ್ಲಿನ ಉದ್ದದ ಜಾಡನ್ನು ಹಿಡಿಯಲು ಬಯಸುತ್ತಾಳೆ.




ಮೀಟರ್ ಹಗ್ಗವನ್ನು ಟೈಲರ್ ಉಪಯೋಗಿಸುವ ಅಳತೆ ಟೇಪ್‌ನೊಂದಿಗೆ ಹೋಲಿಸಿ. ಎರಡರ ಉದ್ದ ಒಂದೇ ಅಥವಾ ಬೇರೆ ಆಗಿದೆಯೇ?

ಅಳತೆ ಟೇಪ್‌ನ್ನು ವೀಕ್ಷಿಸಿ. ನೀವು ಏನನ್ನು ಗಮನಿಸಿದಿರಿ?



ಈ ಗುರುತುಗಳು ಸ್ಪಷ್ಟವಾಗಿ ಅಳತೆ ಮಾಡಲು ಹೇಗೆ ಉಪಯುಕ್ತವಾಗಿವೆ ಎಂಬುದನ್ನು ಚರ್ಚಿಸಿ.



ಕೆಂಪು ಬಾರ್ ಪಟ್ಟಿ 10 ಬಾರಿ ಪುನರಾವರ್ತನೆಯಾಗಿ 10 cm ನ್ನು ಮಾಡುತ್ತದೆ. ಕೆಂಪು ಬಾರ್‌ನ್ನು 100 ಬಾರಿ ಪುನರಾವರ್ತಿಸಿದಾಗ, ನಾವು 1 ಮೀಟರ್ ಪಟ್ಟಿ / ಟೇಪ್ ಪಡೆಯುತ್ತೇವೆ

1 ಮೀಟರ್ (m) = 100 ಸೆಂಟಿ ಮೀಟರ್ (cm)


$\frac{1}{2}$ m = _____ cm, $\frac{1}{4}$ m = _____ cm

ಈಗ ಅಳತೆ ಟೇಪ್/ ಪಟ್ಟಿಯನ್ನು ಉಪಯೋಗಿಸಿ, ನಿಮ್ಮ ಗಿಡಗಳು ಪ್ರತಿವಾರ ಎಷ್ಟು ಎತ್ತರ ಬೆಳೆಯುತ್ತವೆ ಎಂಬುದನ್ನು ಗಮನಿಸಿ.


@KTBS NOT TO BE REPUBLISHED

ನಾವು ಮಾಡೋಣ


1. ಅಳತೆ ಪಟ್ಟಿಯನ್ನು ಉಪಯೋಗಿಸಿ ಪ್ರತಿ ವಸ್ತುವನ್ನು ಅಳತೆ ಮಾಡಿ




_____ cm



_____ cm



_____ cm



_____ cm

@KTBS NOT TO BE REPUBLISHED

ವಸ್ತುಗಳ ಹೆಸರುಗಳನ್ನು ಅವುಗಳ ಉದ್ದದ ಏರಿಕೆಯ ಕ್ರಮದಲ್ಲಿ ಬರೆಯಿರಿ.

2. ಮುಂದಿನವುಗಳ ಉದ್ದವನ್ನು ಅಂದಾಜಿಸಿ ಮತ್ತು ನಿಮ್ಮ ಪ್ರತಿಕ್ರಿಯೆಗಳನ್ನು ತರಗತಿಯಲ್ಲಿ ಸ್ನೇಹಿತರೊಂದಿಗೆ ಹೋಲಿಸಿ. 1 cm ಗಿಂತ ಕಡಿಮೆ 1 cm ಗಿಂತ ಹೆಚ್ಚು, ಇರುವ ಅಥವಾ 1 cm ಗೆ ಸಮವಾಗಿರಬಹುದಾದ ಕೆಲವು ವಸ್ತುಗಳ ಉದಾಹರಣೆಯನ್ನು ಬರೆಯಿರಿ. ಅಳತೆ ಮಾಡುವುದರಿಂದ ಪರಿಶೀಲಿಸಿ.

ವಸ್ತುಗಳ ಉದ್ದ	1 cm ಗೆ ಸಮ	1 cm ಗಿಂತ ಹೆಚ್ಚು	1 cm ಗಿಂತ ಕಡಿಮೆ	ನೈಜ ಅಳತೆ
ಬೆರಳಿನ ಉಗುರು				
ಎರೇಸರ್				
ಒಂದು ಇರುವೆ				
ಗೋಧಿ ಕಾಳು				
ರಾಜ್ಮಾ ಬೀಜ				

3. ಮೂರು ಆಟಿಕೆ ಕಾರ್‌ಗಳನ್ನು ತೆಗೆದುಕೊಳ್ಳಿ, ಅದರಲ್ಲಿ ಪ್ರತಿಯೊಬ್ಬರೂ ಎಷ್ಟು ದೂರ ಹೋಗಬಹುದು ಎಂಬುದನ್ನು ಕಂಡುಹಿಡಿಯಿರಿ. ನೀವು ಚಿಕ್ಕ ಮರದ ಇಳಿಜಾರನ್ನು ಉಪಯೋಗಿಸಬಹುದು ಅಥವಾ ನಿಮ್ಮಲ್ಲಿರುವ ಯಾವುದಾದರೂ ಸಾಮಗ್ರಿಯನ್ನು ಬಳಸಿ ಇಳಿಜಾರನ್ನು ಮಾಡಬಹುದು.


ಅಳತೆ ಟೇಪ್ ಉಪಯೋಗಿಸಿ, ನಿಮ್ಮ ಪ್ರತಿಯೊಬ್ಬರ ಕಾರ್ ಎಷ್ಟು ದೂರ ಕ್ರಮಿಸಿತು ಎಂಬುದನ್ನು ಅಳತೆ ಮಾಡಿ ಉತ್ತರಗಳನ್ನು cm ಗಳಲ್ಲಿ ಬರೆಯಿರಿ.

ಕಾರ್	ಇಳಿಜಾರಿನಿಂದ ದೂರ	ಶ್ರೇಣಿ
ಕಾರ್ 1	_____ cm	
ಕಾರ್ 2	_____ cm	
ಕಾರ್ 3	_____ cm	

ಶಿಕ್ಷಕರಿಗೆ ಟಿಪ್ಪಣಿ: ವಿದ್ಯಾರ್ಥಿಗಳು ವೀಕ್ಷಿಸಲು, ಒಂದು ಮೀಟರ್ ಅಳತೆ ಪಟ್ಟಿ ಅಥವಾ ಅಳತೆ ಟೇಪ್‌ನ್ನು ತೆಗೆದುಕೊಂಡು ಬನ್ನಿ. ಟೇಪ್‌ನ ಮೇಲೆ ಬರೆದಿರುವ ಗುರುತುಗಳು ಮತ್ತು ಸಂಖ್ಯೆಗಳನ್ನು ವಿದ್ಯಾರ್ಥಿಗಳು ವೀಕ್ಷಿಸಲು ಅವಕಾಶ ನೀಡಿ. ಟೇಪ್ ಮೇಲಿನ 100 ಏನನ್ನು ಸೂಚಿಸುತ್ತದೆ. ಎಂಬುದನ್ನು ಚರ್ಚಿಸಿ. ಕೆಲವೊಮ್ಮೆ ಅವುಗಳು ಟೇಪ್‌ನ ಮೇಲಿನ ಗುರುತುಗಳು ಎಂದು ಊಹಿಸಬಹುದು. ಎರಡು ಗುರುತುಗಳ ನಡುವಿನ ದೂರ ಒಂದು ಸೆಂಮೀಟರ್ (1 cm) ಮತ್ತು ಒಂದು ಮೀಟರ್‌ನ್ನು ಅಂತಹ 100 ದೂರಗಳಾಗಿ ವಿಭಾಗಿಸಲಾಗಿರುತ್ತದೆ ಎಂಬುದರ ಬಗ್ಗೆ ವಿದ್ಯಾರ್ಥಿಗಳ ಗಮನ ಸೆಳೆಯಿರಿ. ಅಂತಹ ವೀಕ್ಷಣೆಗಳನ್ನು ವಿದ್ಯಾರ್ಥಿಗಳು ಮಾಡಿದ ನಂತರ, ಚಿಕ್ಕ ಉದ್ದಗಳನ್ನು ಅಳತೆ ಮಾಡಲು, ಮಕ್ಕಳು ಅಳತೆ ಟೇಪ್/ಪಟ್ಟಿಯನ್ನು ಉಪಯೋಗಿಸಬಹುದು

© KTBS NOT TO BE REPUBLISHED


4. ಈ ನಿಧಿಯ ಬೇಟೆಯಲ್ಲಿ ಅತೀ ದೀರ್ಘವಾದ ಮತ್ತು ಅತೀ ಚಿಕ್ಕದಾದ ಮಾರ್ಗವನ್ನು ಕಂಡುಹಿಡಿಯಿರಿ. ನೀವು ಅಡ್ಡಿಗಳ ಮೂಲಕ ಹಾದು ಹೋಗಬಹುದು ಆದರೆ ಅವುಗಳ ಮೇಲೆ ಜಿಗಿಯುವಂತಿಲ್ಲ. ನೀವು ಹಳದಿ ಟೈಲ್‌ಗಳ ಮೇಲೆ ನಡೆಯಬಹುದು ಆದರೆ ಹುಲ್ಲಿನ ಮೇಲೆ ನಡೆಯುವಂತಿಲ್ಲ. ನಿಮ್ಮ ಮಾರ್ಗದ ಉದ್ದವನ್ನು ಸೆಂಟಿಮೀಟರ್‌ಗಳಲ್ಲಿ ಕಂಡುಹಿಡಿಯಬಲ್ಲಿರಾ? ನಕ್ಷೆಯಲ್ಲಿನ 1 cm ನ ಸುಳುಹಿಗಾಗಿ ನೋಡಿ



@KTBS NOT TO BE REPUBLISHED

5. ಒಂದು ಕಾಗದದ ತುಂಡಿನ ಮೇಲೆ ನಿಮ್ಮ ಕೈಯನ್ನು ಟ್ರೇಸ್ ಮಾಡಿ. ಅಳತೆ ಪಟ್ಟಿ ಉಪಯೋಗಿಸಿ ಅದನ್ನು ಅಳತೆ ಮಾಡಿ.


ನನ್ನ ಕೈ ಉದ್ದ = _____ cm



6. ಯಾವುದೇ ವಸ್ತುವಿನ ಅಳತೆಯನ್ನು ಅಂದಾಜಿಸಲು ನಿಮ್ಮ ಕೈ ಉಪಯೋಗಿಸಿ ಅದನ್ನು ಸೆಂಟಿ ಮೀಟರ್‌ಗಳಿಗೆ ಪರಿವರ್ತಿಸಿ ಅಳತೆ ಪಟ್ಟಿ ಉಪಯೋಗಿಸಿ ಪರಿಶೀಲಿಸಿ.


ವಸ್ತು	ಕೈಗಳ ಸಂಖ್ಯೆ	ಕೈ ಬಳಸಿ ಅಂದಾಜು	**cm** ಪಟ್ಟಿ ಬಳಸಿದಾಗ ನೈಜ ಅಳತೆ
1. ನನ್ನ ಪಠ್ಯಪುಸ್ತಕದ ಉದ್ದ		_____ cm	_____ cm
2. ನನ್ನ ಕುರ್ಚಿಯ ಎತ್ತರ		_____ cm	_____ cm
3. ನನ್ನ ಡೆಸ್ಕ್‌ನ ಅಗಲ		_____ cm	_____ cm
4. ಹೂ ಕುಂಡದ ಎತ್ತರ		_____ cm	_____ cm

7. ಅಶ್ವಿನ್‌ನ ಅಳತೆ ಪಟ್ಟಿ ಮುರಿದಿದೆ. ಈ ಅಳತೆಪಟ್ಟಿಯನ್ನು ಉಪಯೋಗಿಸಿ, ಅವನಿಗೆ ಅಳತೆ ಮಾಡಲು ಸಹಾಯ ಮಾಡಬಲ್ಲಿರಾ?






_____ cm




_____ cm

8. ಮುಂದೆ ನೀಡಿರುವ ಸಂಖ್ಯಾರೇಖೆಯ ಮೇಲಿನ ಖಾಲಿ ಜಾಗಗಳನ್ನು ಸೂಕ್ತವಾಗಿ ಭರ್ತಿ ಮಾಡಿ.



9. ಒಂದು ಬೋರ್ಡ್‌ನ ಉದ್ದ 2 ಮೀಟರ್‌ಗಳು. ಸೋನು ಬಳಿ ಒಂದು ಅಲಂಕಾರಿಕ ಅಂಚಿನ ಸ್ಟಿಕ್ಕರ್ ಇದ್ದು ಅದು 20 cm ಉದ್ದವಿದೆ. ಬೋರ್ಡ್‌ನ ಉದ್ದವನ್ನು ಸಂಪೂರ್ಣವಾಗಿ ಮುಚ್ಚಲು ಅಂತಹ ಎಷ್ಟು ಸ್ಟಿಕ್ಕರ್‌ಗಳು ಬೇಕಾಗುತ್ತವೆ?



@KTBS NOT TO BE REPUBLISHED

ಮೀಟರ್ ಮತ್ತು ಸೆಂಟಿಮೀಟರ್




ರಾಮು ಮತ್ತು ಶಾಮು ತಮ್ಮ ಎತ್ತರಗಳನ್ನು ಅಳತೆ ಮಾಡಲು ಅಳತೆ ಟೇಪ್‌ನ್ನು ಉಪಯೋಗಿಸುತ್ತಾರೆ.

ರಾಮು ತನ್ನ ಎತ್ತರವನ್ನು ಟೇಪ್‌ನಲ್ಲಿ 120 cm ಎಂದು ಓದುತ್ತಾನೆ ಮತ್ತು ಸೋಮು ಅದನ್ನು 1 m 20 cm ಎಂದು ಓದುತ್ತಾನೆ.

ಯಾರು ಸರಿ?

ಪಿಂಕಿ ಎರಡೂ ಸರಿ ಎಂದು ಹೇಳುತ್ತಾಳೆ ಮತ್ತು ಇದನ್ನು ಎಳೆಯುತ್ತಾಳೆ.



ನಾವು ಮಾಡೋಣ

1. ಗ್ರಾಮದ ಸರಪಂಚರೊಬ್ಬರು ತಮ್ಮ ಹಳ್ಳಿಯಲ್ಲಿನ ಬಾವಿಗಳ ಆಳಗಳನ್ನು ಇಬ್ಬರು ಬೇರೆ ಬೇರೆ ವ್ಯಕ್ತಿಗಳಿಂದ ಅಳತೆ ಮಾಡಿಸಿದ್ದಾರೆ.

a) ಆಳಗಳು ಒಂದೇ ಆಗಿರುವಂತೆ ಖಾಲಿ ಜಾಗಗಳನ್ನು ಭರ್ತಿ ಮಾಡಿ.

i) 2 m = 200 cm

ii) _ m = 400 cm

iii) 6 m = ____cm

iv) _ m = 800m

b) ಒಂದೇ ಆಳವನ್ನು ಹೊಂದಿರುವ ಬಾವಿಗಳನ್ನು ಗುರ್ತಿಸಿ ಮತ್ತು ಅವುಗಳನ್ನು ಹೊಂದಿಸಿ.

1 m 40 cm	550 cm
4 m 60 cm	140 cm
2 m 30 cm	460 cm
5 m 50 cm	230 cm

© KTBS NOT TO BE REPUBLISHED

ನಾವು ಅನ್ವೇಷಿಸೋಣ

ಚಟುವಟಿಕೆ: ವಿದ್ಯಾರ್ಥಿಗಳು ತಮ್ಮ ಎತ್ತರವನ್ನು ಅಳತೆ ಟೇಪ್ ಉಪಯೋಗಿಸಿ ಅಳೆಯುತ್ತಾರೆ. ನಿಮ್ಮ ನೋಟ್ ಪುಸ್ತಕದಲ್ಲಿ ಒಂದು ಕೋಷ್ಟಕವನ್ನು ಮಾಡಿ ಮತ್ತು ಅದನ್ನು ಪೂರ್ಣಗೊಳಿಸಿ.

ವಿದ್ಯಾರ್ಥಿಯ ಹೆಸರು	ಎತ್ತರ **cm** ನಲ್ಲಿ	ಎತ್ತರ **m** ನಲ್ಲಿ

ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಅತೀ ಎತ್ತರದ ಮಗುವಿನ ಎತ್ತರ _____.
2. ಅತೀ ಕಡಿಮೆ ಎತ್ತರದ ಮಗುವಿನ ಎತ್ತರ _____.
3. 1 m ಗಿಂತ ಹೆಚ್ಚು ಎತ್ತರ ಇರುವ ಮಕ್ಕಳ ಸಂಖ್ಯೆ _____.
4. 1 m ಗಿಂತ ಕಡಿಮೆ ಎತ್ತರ ಇರುವ ಮಕ್ಕಳ ಸಂಖ್ಯೆ _____.

ಬೇಲಿ ಹಾಕುವುದು ಮತ್ತು ಕಸೂತಿ ಮಾಡುವುದು

ಬೋಲಾ ತನ್ನ ತರಕಾರಿ ತೋಟಕ್ಕಾಗಿ ಇಟ್ಟಿಗೆಗಳಿಂದ ಸೀಮೆಯನ್ನು ಮಾಡುತ್ತಿದ್ದಾನೆ. ಸೀಮೆಯಲ್ಲಿನ ಇಟ್ಟಿಗೆಗಳಿಗೆ ಬಣ್ಣ ಹಾಕಿ. ಗಡಿಯನ್ನು ಮಾಡಲು ಅಂತಹ ಎಷ್ಟು ಇಟ್ಟಿಗೆಗಳ ಅಗತ್ಯವಿದೆ?


ಒಂದು ವಸ್ತುವಿನ ಅಥವಾ ಆಕೃತಿಯ ಗಡಿಯ ಉದ್ದವನ್ನು ಅದರ ಸುತ್ತಳತೆ ಎಂದು ಕರೆಯುತ್ತಾರೆ



ಶಿಕ್ಷಕರಿಗೆ ಟಿಪ್ಪಣಿ: ಒಂದು ಆವೃತ ಆಕೃತಿಯ ಗಡಿಯ ಉದ್ದವೇ ಸುತ್ತಳತೆ ಹಾಗೂ ಇದನ್ನು ಹಲವಾರು ಅನೌಪಚಾರಿಕ ಮಾನಗಳಾದ ಹೆಜ್ಜೆಗಳು, ಬೆರಳಚ್ಚುಗಳು ಮತ್ತು ಬ್ಲಾಕ್ ಪ್ರಿಂಟ್‌ಗಳಿಂದ ಅಳತೆ ಮಾಡಬಹುದು ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿ. ಅಂತಹ ಅಳತೆಗಳು ಸಾಮಾನ್ಯವಾಗಿ ಅಂದಾಜುಗಳಾಗಿರುತ್ತವೆ ಆದರೆ ಅವುಗಳನ್ನು ಔಪಚಾರಿಕ ಮಾನಗಳು ಅಥವಾ ಅಳತೆ ಟೇಪ್ ಬಳಸಿ ಹೆಚ್ಚು ನಿಖರವಾಗಿ ಅಳೆಯಬಹುದು.


ನಾವು ಮಾಡೋಣ

1. ಬೋಲಾ ತನ್ನ ತೋಟಗಳ ಗಡಿಯನ್ನು ಮುಂದಿನ ವಿಧಗಳಲ್ಲಿ ಮಾಡಿದನು. ಅತೀ ಉದ್ದವಾಗಿರುವ ಗಡಿಗೆ ವೃತ್ತ ಹಾಕಿ.



2. Let us find the perimeter of some shapes using the dot grid. One is done for you.

ಚುಕ್ಕೆ ಗ್ರಿಡ್ ಉಪಯೋಗಿಸಿ, ಕೆಲವು ಆಕೃತಿಗಳ ಸುತ್ತಳತೆಯನ್ನು ಕಂಡುಹಿಡಿಯೋಣ ಒಂದನ್ನು ನಿಮಗಾಗಿ ಮಾಡಿದೆ.




a) ಉದ್ದದಲ್ಲಿ ಅತೀ ಉದ್ದವಾಗಿರುವ ಗಡಿಗೆ ನೀಲಿ ಬಣ್ಣ ಹಾಕಿ

b) ಉದ್ದದಲ್ಲಿ ಅತೀ ಕಡಿಮೆ ಇರುವ ಗಡಿಗೆ ಹಸಿರು ಬಣ್ಣ ಹಾಕಿ

c) ಒಂದೇ ಉದ್ದವಿರುವ ಆಕೃತಿಗಳಿಗೆ ಟಿಕ್ ಮಾಡಿ


ಶಿಕ್ಷಕರಿಗೆ ಟಿಪ್ಪಣಿ: ಒಂದು ಆಕೃತಿಯ ಸುತ್ತಲಿನ ದೂರ ಅಥವಾ ಉದ್ದವೇ ಸುತ್ತಳತೆ ಎಂಬುದನ್ನು ಮಕ್ಕಳು ಗಮನಿಸಲು ಸಹಾಯ ಮಾಡಿ, ಸುತ್ತಳತೆಯನ್ನು ಅಳತೆ ಮಾಡಲು 1 cm ನ ಚುಕ್ಕೆ ಗ್ರಿಡ್‌ಗಳು ಸಹಾಯಕ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಲಿ

3. ಮುಂದಿನ ಆಕೃತಿಗಳಲ್ಲಿ ಯಾವುಗಳಾದರೂ ಒಂದೇ ಸುತ್ತಳತೆಯನ್ನು ಹೊಂದಿವೆಯೇ ? ಟಿಕ್ ಮಾಡಿ.



© KTBS NOT TO BE REPUBLISHED

4. ಕನಿಷ್ಠ ಸುತ್ತಳತೆ ಇರುವ ತೋಟಕ್ಕೆ ಟಿಕ್ ಮಾಡಿ.




5. ನಿಮ್ಮ ಸುತ್ತಲಿರುವ ಆಕೃತಿಗಳ ಸುತ್ತಳತೆಗಳನ್ನು ಅಂದಾಜಿಸಿ ಮತ್ತು ಅಳತೆ ಪಟ್ಟಿ ಉಪಯೋಗಿಸಿ ಅಳತೆ ಮಾಡಿ. ಅಳತೆಗಳನ್ನು ಮುಂದೆ ನೀಡಿರುವ ಸ್ಥಳದಲ್ಲಿ ಬರೆಯಿರಿ.

ಕ್ರ.ಸಂ	ವಸ್ತು	ಅಂದಾಜಿಸಿದ ಸುತ್ತಳತೆ cm/m ನಲ್ಲಿ	ನೈಜವಾದ ಅಳತೆ cm/m ನಲ್ಲಿ
1.	ಡೆಸ್ಕ್		
2.	ಕಪ್ಪು ಹಲಗೆ		
3.	ತರಗತಿಯ ನೆಲ		
4.			
5.			
6.			

@KTBS NOT TO BE REPUBLISHED

6. 20 cm ಸುತ್ತಳತೆ ಇರುವ ಮೂರು ವಿವಿಧ ಆಕೃತಿಗಳನ್ನು ರಚಿಸಿ.



@KTBS
NOT TO BE REPUBLISHED

ಅಧ್ಯಾಯ

7


ಅತ್ಯಂತ ಸ್ವಚ್ಛ ಗ್ರಾಮ



ನನ್ನ ಶಾಲಾ ಪ್ರವಾಸ

ಡೈಸಿ ಮತ್ತು ಲೂ ಮೇಘಾಲಯದ ಶಿಲ್ಲಾಂಗ್‌ನಲ್ಲಿ 4 ನೇ ತರಗತಿಯಲ್ಲಿ ಓದುತ್ತಿದ್ದಾರೆ. ಶಾಲೆಯು ಒಂದು ಕ್ಷೇತ್ರ ಭೇಟಿಗಾಗಿ ಮುಂದಿನ ಭಿತ್ತಿಪತ್ರವನ್ನು ಪ್ರಚುರಪಡಿಸಿದೆ.

ಶಾಲಾ ಪ್ರವಾಸ: ಡಿಸೆಂಬರ್ 30, 2025



ಮಾಲೀನೋಗ್ಗ್ ಏಕೆ?

- ಏಷ್ಯಾದ ಅತ್ಯಂತ ಸ್ವಚ್ಛ ಗ್ರಾಮ
- ದೇವರ ಸ್ವಂತ ತೋಟ
- ಪರಿಸರ ಸ್ನೇಹಿ ಜೀವನ

ಮುಖ್ಯ ಆಕರ್ಷಣೆಗಳು

- ಜಿಂಗ್‌ಮಹಾಮ್ ಜೀವ ಬೇರಿನ ಸೇತುವೆ
- ಎಪಿಫ್ಹಾನಿ ಚರ್ಚ್
- ಮಾಫ್ಲಿನ್ನಾಂಗ್ ಜಲಪಾತ

ಲೊಕೇಶನ್: ಪಶ್ಚಿಮ ಖಾಸಿ ಬೆಟ್ಟಗಳು

ಜನಸಂಖ್ಯೆ: ಖಾಸಿ ಬುಡಕಟ್ಟು 77 ಕುಟುಂಬಗಳು, 414ಜನರು

ಚಟುವಟಿಕೆಗಳು: ಪ್ರೇಕ್ಷಣೀಯ ಸ್ಥಳಗಳ ಭೇಟಿ, ಸಂಪದ್ಭರಿತ ಸಂಸ್ಕೃತಿ, ಪ್ರಕೃತಿ

ಸಾರಿಗೆ: ಶಾಲಾ ಬಸ್

ಶಾಲೆಯಿಂದ ಹೊರಡುವ ವೇಳೆ: ಬೆಳಿಗ್ಗೆ 7 ಗಂಟೆ.

ಶಾಲೆಗೆ ಹಿಂದಿರುಗುವುದು: ಸಂಜೆ 4 ಗಂಟೆ.

ಈಗಲೇ ನೊಂದಾಯಿಸಿಕೊಳ್ಳಿ!!

₹500 ಪ್ರತಿ ಮಗುವಿಗೆ


ಸಂಪರ್ಕಿಸಿ: ಶ್ರೀಮತಿ ರೀಟಾ

ಇವುಗಳನ್ನು ತನ್ನಿರಿ – ಟೋಪಿ, ನೀರಿನ ಬಾಟಲ್, ಊಟ

© NCERT NOT TO BE REPUBLISHED

ಡೈಸಿ ಮತ್ತು ಲೂ ಖರೀದಿಸಲು ಹೋಗುತ್ತಾರೆ.

ಡೈಸಿ ಮತ್ತು ಲೂ ತಮ್ಮ ಪ್ರವಾಸದ ಬಗ್ಗೆ ಅತ್ಯಂತ ಉತ್ಸುಕರಾಗಿದ್ದಾರೆ. ಅವರು ತಮ್ಮ ಪ್ರವಾಸಕ್ಕಾಗಿ ಅಗತ್ಯವಿರುವ ವಸ್ತುಗಳನ್ನು ಕೊಳ್ಳಲು ತಮ್ಮ ತಾಯಿ ಪ್ರತಿ ವಾರ ಖರೀದಿಗೆ ಹೋಗುವಾಗ ಅವರೊಂದಿಗೆ ಸೇರಿಕೊಳ್ಳುತ್ತಾರೆ. ಕುಟುಂಬವು ಖರೀದಿಸಬೇಕಾದ ವಸ್ತುಗಳ ಪಟ್ಟಿಯನ್ನು ಮಾಡುತ್ತದೆ:



- ಹಣ್ಣು ಮತ್ತು ತರಕಾರಿಗಳು
- ಕ್ಷೇತ್ರ ಭೇಟಿಗೆ ಅಗತ್ಯವಾದ ವಸ್ತುಗಳು – ಬಿಸ್ಕತ್‌ಗಳು, ನೀರಿನ ಬಾಟಲ್‌ಗಳು ಮತ್ತು ಒಣ ಹಣ್ಣುಗಳು

ಸಪನ್ ತಾತ ಅವರಲ್ಲಿ ತರಕಾರಿ ಮತ್ತು ಹಣ್ಣುಗಳನ್ನು ಮಾರಲು ಒಂದು ಗಾಡಿ ಇದೆ. ತರಕಾರಿ ಮತ್ತು ಹಣ್ಣುಗಳ ಬೆಲೆಗಳನ್ನು ಮುಂದೆ ನೀಡಿದೆ.

@KTBS NOT TO BE REPUBLISHED

	ಒಂದು kg ಯ ಬೆಲೆ
ಸೀತಾಫಲ:	₹45
ಹುರುಳಿಕಾಯಿ:	₹95
ಮೂಲಂಗಿ:	₹ 23
ಈರುಳ್ಳಿ:	₹32
ಆಲೂಗಡ್ಡೆ:	₹ 37
ಸುವರ್ಣಗಡ್ಡೆ:	₹45
ಸಪೋಟಾ:	₹ 70
ಪರಂಗಿ:	₹65
ಬಾಳೆಹಣ್ಣು:	₹55

ಡೈಸಿ ಮತ್ತು ಲೂ ಅವರುಗಳಿಗೆ ಹಣ್ಣು ಮತ್ತು ತರಕಾರಿಗಳ ವಿವಿಧ ಪರಿಮಾಣಗಳ ಬೆಲೆಗಳನ್ನು ಕಂಡುಹಿಡಿಯಲು ಸಪನ್ ತಾತ ಹೇಳುತ್ತಾರೆ. ಅವರಿಗೆ ಕೆಲಸಗಳನ್ನು ಪೂರ್ಣಗೊಳಿಸಲು ಸಹಾಯ ಮಾಡಿ. ನೀವು ಸಂಖ್ಯಾ ರೇಖೆ, ಆಟಿಕೆ ಹಣ ಅಥವಾ ಇತರೆ ಯಾವುದಾದರೂ ವಿಧಾನವನ್ನು ಲೆಕ್ಕ ಮಾಡಲು ಬಳಸಬಹುದು.

2 kg ಹುರುಳಿಕಾಯಿ

_____

1 ಕೆಜಿ ಸೀತಾಫಲ ಮತ್ತು
1 kg ಸಪೋಟಾ

_____

1 kg ಈರುಳ್ಳಿ ಮತ್ತು
1 kg ಆಲೂಗಡ್ಡೆ

_____

1 kg ಮೂಲಂಗಿ ಮತ್ತು
1 kg ಸುವರ್ಣಗಡ್ಡೆ

_____

2 kg ಮೂಲಂಗಿ ಮತ್ತು
2 kg ಪರಂಗಿ

_____

2 kg ಈರುಳ್ಳಿ ಮತ್ತು
2 kg ಆಲೂಗಡ್ಡೆ

_____

ಈ ಎರಡೂ ಬೆಲೆಗಳಲ್ಲಿ ನೀವು ಏನನ್ನು ಗಮನಿಸಿದಿರಿ?

ಅವರ ತಾಯಿ ₹ 163 ಕ್ಕೆ ಸಾಮಗ್ರಿಗಳನ್ನು ಖರೀದಿಸುತ್ತಾರೆ. ಅವರು ಏನು ಖರೀದಿಸಿರಬಹುದು? ಒಂದಕ್ಕಿಂತ ಹೆಚ್ಚು ಸಾಧ್ಯತೆಗಳಿವೆ.

_____

_____

₹ 163

@KTBS NOT TO BE REPUBLISHED



ಉದಯ ಅಜ್ಜಿ ಒಂದು ಅಂಗಡಿಯನ್ನು ನಡೆಸುತ್ತಿದ್ದು ಅಲ್ಲಿ ಅಕ್ಕಿ, ಗೋಧಿ, ಬೆಳೆ ಮತ್ತು ಮಸಾಲೆ ಪದಾರ್ಥಗಳನ್ನು ಮಾರುತ್ತಾರೆ. ಅವರ ತಾಯಿ ದಿನಸಿ ಪದಾರ್ಥಗಳನ್ನು ಖರೀದಿಸುತ್ತಿರುವಾಗ, ಡೈಸಿ ಮತ್ತು ಲೂ ಉದಯ ಅಜ್ಜಿಗೆ ಗಿರಾಕಿಗಳಿಗೆ ಬಾಕಿ ಹಣವನ್ನು ಹಿಂದಿರುಗಿಸಲು ಸಹಾಯ ಮಾಡುತ್ತಾರೆ. ಉದಯ ಅಜ್ಜಿ ಸಹ ಕೆಲವು ಜಾಣತನದ ಪ್ರಶ್ನೆಗಳನ್ನು ಕೇಳುತ್ತಾರೆ.

ಮುಂದಿನ ಪ್ರತಿಯೊಂದರಲ್ಲಿ ಬಿಟ್ಟು ಹೋಗಿರುವ ಸಂಖ್ಯೆಗಳನ್ನು ಕಂಡುಹಿಡಿಯಲು ಅವರಿಗೆ ಸಹಾಯ ಮಾಡಿ. ಬಾಕಿ ಹಣವನ್ನು ಕಂಡುಹಿಡಿಯಲು, ಸಂಖ್ಯಾರೇಖೆ, ಆಟಿಕೆ ಹಣ ಅಥವಾ ಬೇರೆ ಯಾವುದೇ ವಿಧಾನವನ್ನು ಬಳಸಿಕೊಳ್ಳಿ.

ಬೆಲೆ -	₹113
ಪಾವತಿಸಿರುವುದು -	₹150
ಬಾಕಿ -	₹37

ಬೆಲೆ -	₹185
ಪಾವತಿಸಿರುವುದು -	₹200
ಬಾಕಿ -	

ಬೆಲೆ -	
ಪಾವತಿಸಿರುವುದು -	₹200
ಬಾಕಿ -	0

ಬೆಲೆ -	₹435
ಪಾವತಿಸಿರುವುದು -	₹500
ಬಾಕಿ -	

ಬೆಲೆ -	₹149
ಪಾವತಿಸಿರುವುದು -	₹500
ಬಾಕಿ -	

ಬೆಲೆ -	₹46
ಪಾವತಿಸಿರುವುದು -	
ಬಾಕಿ -	

ಬೆಲೆ -	
ಪಾವತಿಸಿರುವುದು -	₹200
ಬಾಕಿ -	₹75

ಬೆಲೆ -	₹580
ಪಾವತಿಸಿರುವುದು -	
ಬಾಕಿ -	₹120

ಬೆಲೆ -	
ಪಾವತಿಸಿರುವುದು -	
ಬಾಕಿ -	



ಲೂ ಮತ್ತು ಡೈಸಿ ದಾರಿ ಮಧ್ಯೆ ತಮ್ಮ ಸ್ನೇಹಿತರೊಂದಿಗೆ ತಿನ್ನಲು 3 kg ಬಾಳೆಹಣ್ಣನ್ನು ಖರೀದಿಸುತ್ತಾರೆ. ಬಾಳೆಹಣ್ಣನ್ನು ಖರೀದಿಸಲು ಅವರು ಮುಂದಿನವುಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬಹುದು?

ⓐ



ⓑ



ⓒ



ⓓ




ⓔ



ಶಿಕ್ಷಕರಿಗೆ ಟಿಪ್ಪಣಿ: ವಿದ್ಯಾರ್ಥಿಗಳಿಗೆ ತಮ್ಮ ಕ್ರಮಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸಿ ಮತ್ತು ಅವುಗಳನ್ನು ತರಗತಿಯಲ್ಲಿ ಚರ್ಚಿಸಿ. ಮೇಲಿನ ಸಮಸ್ಯೆಗಳನ್ನು ಪರಿಹರಿಸಲು ಅವರಿಗೆ ಸೂಕ್ತವೆನಿಸುವ ಕ್ರಮಗಳನ್ನು ಉಪಯೋಗಿಸಲು ಮಾರ್ಗದರ್ಶನ ನೀಡಿ.

© KTBS NOT TO BE REPUBLISHED

ಒಂದು ವಿಚಿತ್ರ ಒಗಟು



ನಾಲ್ಕು ತುಂಟ ಮಕ್ಕಳು ನಡೆದಾಡುತ್ತಿರುವಾಗ ಒಂದು ತಾಜಾ ಕಿತ್ತಳೆ ಬೆಳೆಯೆಡೆಗೆ ಬರುತ್ತಾರೆ.

ಅವರು ರೈತನನ್ನು ಒಂದರ ಬೆಲೆ ಎಷ್ಟು ಎಂದು ಕೇಳುತ್ತಾರೆ.

ರೈತ ಹೇಳುತ್ತಾನೆ "ಪ್ರತಿಯೊಂದರ ಬೆಲೆ ₹ 21".

ಪ್ರತಿಯೊಬ್ಬರೂ ಎರಡೆರಡು ಕಿತ್ತಳೆಗಳನ್ನು ಖರೀದಿಸುತ್ತಾರೆ.

ರೈತನು ಅವರೆಡೆಗೆ ಒಂದು ನೋಟವನ್ನು ಬೀರುತ್ತಾನೆ.

ಅವರೆಲ್ಲರೂ ತಮ್ಮ ಜಾಕೆಟ್‌ನೊಳಗೆ ಕೈಹಾಕಿ, ತಮ್ಮ ಪಾಕೆಟ್‌ಗಳಿಂದ ನೋಟ್‌ಗಳನ್ನು ಹೊರತೆಗೆಯುತ್ತಾರೆ.

ಪ್ರತಿಯೊಬ್ಬರೂ ಬೇರೆ ಬೇರೆ ನೋಟ್‌ಗಳನ್ನು ನೀಡುತ್ತಾರೆ.

ಕೃಷ್ಣ ₹ 50 ರ ಒಂದು ನೋಟ್ ಮತ್ತು ಸುಧಾಮ ₹ 100 ರ ನೋಟ್

ಮಾಲಾ ₹ 200 ರ ನೋಟ್ ಮತ್ತು ನೀಲಾ ₹ 500 ರ ನೋಟ್

ಪ್ರತಿಯೊಬ್ಬರೂ ಪಡೆದ ಉಳಿಕೆ ಹಣ ಎಷ್ಟು?

ಕೃಷ್ಣ
ಪಾವತಿಸಿದ್ದು: ₹ _____
ಉಳಿಕೆ: ₹ _____

ಸುಧಾಮ
ಪಾವತಿಸಿದ್ದು: ₹ _____
ಉಳಿಕೆ: ₹ _____

ಮಾಲಾ
ಪಾವತಿಸಿದ್ದು: ₹ _____
ಉಳಿಕೆ: ₹ _____


ನೀಲಾ
ಪಾವತಿಸಿದ್ದು: ₹ _____
ಉಳಿಕೆ: ₹ _____

@KTBS NOT TO BE REPUBLISHED

ನಾವು ಆಡೋಣ


ತ್ರಿಭುಜದ ಪ್ರತಿ ಬಾಹುವಿನ ಮೇಲಿನ ಸಂಖ್ಯೆಗಳ ಮೊತ್ತ 9 ಆಗುವಂತೆ 1–6 ರವರೆಗಿನ ಸಂಖ್ಯೆಗಳನ್ನು ಖಾಲಿ ಜಾಗಗಳಲ್ಲಿ ತುಂಬಿ. ಯಾವುದೇ ಸಂಖ್ಯೆಗಳು ಪುನರಾವರ್ತನೆ ಆಗಬಾರದು.

1 2 3 4



1–6 ರವರೆಗಿನ ಸಂಖ್ಯೆಗಳನ್ನು ಉಪಯೋಗಿಸಿ, ತ್ರಿಭುಜದ ಪ್ರತಿ ಬಾಹುವಿನ ಮೊತ್ತ 10 ಆಗುವಂತೆ ಮಾಡಿ.

1	2	3
4	5	6



ಈ 6 ಅಂಕಿಗಳಿಂದ ನೀವು ಬೇರೆ ಯಾವ ಮೊತ್ತಗಳನ್ನು ಮಾಡಬಹುದು?

ಪ್ರತಿ ಬಾಹುವಿನ ಮೇಲೆ ಮೊತ್ತ 12 ಮಾಡಬಲ್ಲಿರಾ? 13 ಮಾಡಬಲ್ಲಿರಾ?

ಸಂಖ್ಯೆಗಳನ್ನು ತುಂಬಲು ಯಾವ ಮಾರ್ಗೋಪಾಯವನ್ನು ನೀವು ಉಪಯೋಗಿಸಿದಿರಿ?

ಕೂಡಿ

ಡೈಸಿ ಮತ್ತು ಲೂ ಮರುದಿನ ಬೆಳಿಗ್ಗೆ ಬಸ್‌ನಲ್ಲಿ ಕ್ಷೇತ್ರ ಪ್ರವಾಸಕ್ಕಾಗಿ ಹೊರಡುತ್ತಾರೆ. ತಮ್ಮ ಶಾಲೆಯಿಂದ 24 ಶಿಕ್ಷಕರು ಮತ್ತು 438 ಮಕ್ಕಳು ಹೋಗುತ್ತಿದ್ದಾರೆ. ಪಕ್ಕದ ಶಾಲೆಯೊಂದರಿಂದ 476 ಮಕ್ಕಳು ಮತ್ತು 26 ಶಿಕ್ಷಕರೂ ಅದೇ ಹಳ್ಳಿಗೆ ಹೋಗುತ್ತಿದ್ದಾರೆ.

How many teachers are accompanying the children?

ಎಷ್ಟು ಜನ ಶಿಕ್ಷಕರು ಮಕ್ಕಳೊಂದಿಗೆ ಇದ್ದಾರೆ?


24 + 28



ಪ್ರವಾಸಕ್ಕೆ ಹೊರಡುತ್ತಿರುವ ಒಟ್ಟು ಶಿಕ್ಷಕರ ಸಂಖ್ಯೆಯನ್ನು ಅಂದಾಜಿಸಿ.

_____


© KTBS NOT TO BE REPUBLISHED



ಮಕ್ಕಳೊಂದಿಗೆ 52 ಜನ ಶಿಕ್ಷಕರಿದ್ದಾರೆ.

@KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ವಾಕ್ಯ ರೂಪದ ಸಮಸ್ಯೆಗಳನ್ನು ಬಿಡಿಸಲು, 'ಬಿಟ್ಟು ಹೋದ', 'ಮೊತ್ತ', 'ಹೆಚ್ಚು', 'ಕಡಿಮೆ' ಈ ಪದಗಳಿಗಷ್ಟೇ ಸೀಮಿತವಾದರೆ ಸಾಲದು. ಬದಲಾಗಿ, ತಾವು ಪ್ರಶ್ನೆಗಳಿಂದ ಏನನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂಬುದರ ಚಿತ್ರಗಳನ್ನು ರಚಿಸಲು ಶಿಕ್ಷಕರು ಮಕ್ಕಳಿಗೆ ನೆರವಾಗಬೇಕೆಂದು ನಾವು ಸೂಚಿಸುತ್ತೇವೆ. ಈ ಪುಸ್ತಕದ ಕೊನೆಯಲ್ಲಿ, ಕೆಲವು ವಿಧದ ವಾಕ್ಯರೂಪದ ಸಮಸ್ಯೆಗಳು ಮತ್ತು ಅವುಗಳ ಚಿತ್ರಗಳಿಗೆ ಕೆಲವು ಸಲಹೆಗಳನ್ನು ನೀಡಲಾಗಿದೆ.




ಪ್ರವಾಸಕ್ಕೆ ಎಷ್ಟು ಮಕ್ಕಳು ಹೋಗುತ್ತಿದ್ದಾರೆ?

438 + 476

914 ಮಕ್ಕಳು ಮಾಪ್ಲಿನ್ನಾಂಗ್ ಹೊರಡುತ್ತಿದ್ದಾರೆ.

ಪ್ರವಾಸಕ್ಕೆ ಹೊರಡುತ್ತಿರುವ ಮಕ್ಕಳ ಸಂಖ್ಯೆಯನ್ನು ಅಂದಾಜಿಸಿ.



8 ನೂರು + 10 ಹತ್ತು + 14 ಒಂದು
= 9 ನೂರು + 1 ಹತ್ತು + 4 ಒಂದು
= 914

	ನೂರು	ಹತ್ತು	ಒಂದು
	1	1	
	4	3	8
+	4	7	6
	9	11	14
	9	1	4

@KTBS NOT TO BE REPUBLISHED


ಶಿಕ್ಷಕರಿಗೆ ಟಿಪ್ಪಣಿ: ಮೂರ್ತ ವಸ್ತುಗಳಿಂದ ಅಮೂರ್ತ ಅಲ್ಗಾರಿಥಂ ಕಡೆಗೆ ಬದಲಾಗಲು ಕಲಿಕಾರ್ಥಿಗಳಿಗೆ ಬೆಂಬಲ ನೀಡಿ. ಇಲ್ಲಿ ತೋರಿಸಿರುವ ಹಂತಗಳಿಗಿರುವ ಸಂಬಂಧವನ್ನು ಮಕ್ಕಳು ಗಮನಿಸುವುದು ಉತ್ತಮ. ಪ್ರತಿ ಬಾರಿಯೂ 10 ಒಂದುಗಳನ್ನು 10 ರ ಒಂದು ಗುಂಪನ್ನಾಗಿ, 10 ಹತ್ತುಗಳನ್ನು 1 ನೂರರ ಗುಂಪನ್ನಾಗಿ, 10 ನೂರುಗಳನ್ನು 1000 ದ ಒಂದು ಗುಂಪನ್ನಾಗಿ ಪರಿವರ್ತಿಸಲಾಗುತ್ತದೆ ಎಂಬುದನ್ನು ಪ್ರತಿ ಮಗುವಿಗೆ ತೋರಿಸಿ. "ಎರವಲು ಪಡೆಯುವುದು" (ದಶಕ ಪಡೆಯುವುದು) ಪದಕ್ಕೆ ಬದಲಾಗಿ ಪುನರ್ ಗುಂಪು ಮಾಡುವುದು ಎಂಬುದಾಗಿ ಬಳಸಿ. ಒಂದು ಸಂಖ್ಯಾ ರೇಖೆ ಅಥವಾ ಹಿಂದಿನ ತರಗತಿಯಲ್ಲಿ ಮಾಡಿದ ಸ್ಕಿಪ್ ಎಣಿಕೆ ಬಳಸಿ, ಪರಿಹಾರಗಳನ್ನು ಪರಿಶೀಲಿಸಲು ಪ್ರೇರೇಪಿಸಿ. ಮಕ್ಕಳು ಪುನರ್ ಗುಂಪು ಮಾಡುವುದನ್ನು ಸುಲಭವಾಗಿ ಕಲಿಯುವವರೆಗೆ ಕ್ರಿಯೆಗಳನ್ನು 2– ಅಂಕಿಯ ಸಂಖ್ಯೆಗಳೊಂದಿಗೆ ಮಾಡಿ..



ಡೈಸಿ ಮತ್ತು ಲೂ ₹ 38 ಕ್ಕೆ ಪಾಸಾದ ಒಂದು ದೊಡ್ಡ ಭಾಗವನ್ನು ತಿಂದರು. ಅದನ್ನು ಅವರು ಬಹಳ ಇಷ್ಟ ಪಟ್ಟು ಮತ್ತೊಂದು ಚಿಕ್ಕ ಭಾಗವನ್ನು ₹ 16 ಕ್ಕೆ ತಂದರು. ಪಾಸಾಗೆ ಅವರು ಎಷ್ಟು ಖರ್ಚು ಮಾಡಿದರು?

38 + 16


38



ಅವರು ವೆಚ್ಚ ಮಾಡಿದ ಹಣವನ್ನು ಊಹಿಸಿ. _____

\+ ⟶ = _____T + _____ O

16




T ಹತ್ತು	**O** ಒಂದು
+	
	=

ಅವರು ವೆಚ್ಚ ಮಾಡಿದ ಹಣ ₹ _____


ಅಂತಿಮ ಉತ್ತರವನ್ನು ಮೇಲಿನ ಬಾಕ್ಸ್‌ಗಳಲ್ಲಿ ಅವರು ಮರುಗುಂಪು ಮಾಡಿದ ನಂತರ ಬರೆಯಿರಿ.

©KTBS NOT TO BE REPUBLISHED



ಪಾಸಾ ಭಾರತದ ಈಶಾನ್ಯ ಭಾಗದ ಒಂದು ಸಂಪ್ರದಾಯಿಕ ಖಾಸಿ ತಿಂಡಿ. ಇದನ್ನು ಬೆಟ್ಟಗಳಲ್ಲಿ ಮತ್ತು ಖಾಸಿ ಬೆಟ್ಟಗಳ ಭತ್ತದ ಪ್ರದೇಶದಲ್ಲಿ ಬೆಳೆಯಲಾಗುವ ವಿಶೇಷವಾದ ಕೆಂಪು ಅಕ್ಕಿಯಿಂದ ಮಾಡಲಾಗುತ್ತದೆ. ಮಾವ್ರಂಗ್‌ಲ್ಯಾಂಗ್ ಗ್ರಾಮ ತನ್ನ ಪಾಸಾಗಾಗಿ ಪ್ರಸಿದ್ಧವಾಗಿದೆ.

ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳನ್ನು ನಿಧಾನವಾಗಿ ಡೀನ್ ಬ್ಲಾಕ್‌ಗಳ ಬದಲಾಗಿ ಟೋಕನ್‌ಗಳನ್ನು ಉಪಯೋಗಿಸಲು ಪ್ರೋತ್ಸಾಹಿಸಬಹುದು. ಹಂತಗಳಲ್ಲಿ ಏಕರೂಪತೆಯಿರುವುದನ್ನು ಮಕ್ಕಳ ಗಮನಕ್ಕೆ ತನ್ನಿ






ಡೈಸಿ ಮತ್ತು ಲೂ ತಮ್ಮ ಪಿಗ್ಗಿ ಬ್ಯಾಂಕ್‌ನಲ್ಲಿ ₹ 185 ಸಂಗ್ರಹಿಸಿದ್ದಾರೆ. ಅವರ ತಾಯಿ ಪ್ರವಾಸಕ್ಕಾಗಿ ಇನ್ನೂ ₹ 125 ಕೊಟ್ಟರು. ಅವರು ಪ್ರವಾಸಕ್ಕಾಗಿ ಎಷ್ಟು ಹಣ ತೆಗೆದುಕೊಂಡು ಹೋದರು? 185 + 125

ಅವರು ಪ್ರವಾಸಕ್ಕಾಗಿ ತೆಗೆದುಕೊಂಡು ಹೋದ ಹಣವನ್ನು ಅಂದಾಜು ಮಾಡಿ.
_____

185




H + T + O

H + T + O

+

125



	ನೂರು	ಹತ್ತು	ಒಂದು
+			
=			

ಡೈಸಿ ಮತ್ತು ಲೂ ₹ ___ ಪ್ರವಾಸಕ್ಕಾಗಿ ತೆಗೆದುಕೊಂಡು ಹೋದರು.

ಅಂತಿಮ ಉತ್ತರವನ್ನು ಮೇಲಿನ ಬಾಕ್ಸ್‌ಗಳಲ್ಲಿ ಮರು ಗುಂಪು ಮಾಡಿದ ನಂತರ ಬರೆಯಿರಿ.

@KTBS NOT TO BE REPUBLISHED

ನಾವು ಮಾಡೋಣ



1. ಕಲಾಕ್ಷಿತಿಜ್ ಎಂಬ ಕಲಾ ಶಾಲೆಯಲ್ಲಿ, ಮುಂದೆ ಸೂಚಿಸಿರುವ ಸಂಖ್ಯೆಯ ವಿದ್ಯಾರ್ಥಿಗಳು ಹಾಡಲು ಮತ್ತು ತಬಲಾ ನುಡಿಸಲು ಕಲಿಯುತ್ತಿದ್ದಾರೆ. ಅಂದಾಜಿಸಿ ಮತ್ತು ನಂತರ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಿರಿ.

	ತಬಲಾ ನುಡಿಸುವವರು	ಹಾಡುಗಾರರು	ಒಟ್ಟು
ಹುಡುಗರು	78	532	_____ ಹುಡುಗರು
ಹುಡುಗಿಯರು	95	346	_____ ಹುಡುಗಿಯರು
ಒಟ್ಟು	_____ ತಬಲಾ ನುಡಿಸುವವರು	_____ ಹಾಡುಗಾರರು	

@KTBS NOT TO BE REPUBLISHED

ಸಂಗೀತ ಶಾಲೆಗೆ ಇನ್ನೂ 15 ಹೆಣ್ಣು ಮಕ್ಕಳು ಸೇರುತ್ತಾರೆ, ಅವರು ತಬಲಾ ನುಡಿಸುವುದನ್ನು ಕಲಿಯಲು ಬಯಸುತ್ತಾರೆ. ಎಷ್ಟು ಹೆಣ್ಣು ಮಕ್ಕಳು ಈಗ ತಬಲಾ ನುಡಿಸುತ್ತಾರೆ?

2. ನಿಮ್ಮ ನೋಟ್ ಪುಸ್ತಕದಲ್ಲಿ ಸಂಖ್ಯೆಗಳನ್ನು ಕಂಬಸಾಲುಗಳಲ್ಲಿ ಜೋಡಿಸಿ ಕೂಡಿ.

(a) 32 + 47 (b) 654 + 95 (c) 286 + 123

(d) 476 + 324 (e) 700 + 289 (f) 534 + 483

3. ಪ್ರೀತಿಯ ಶಾಲೆಯಲ್ಲಿ 423 ಮಕ್ಕಳಿದ್ದಾರೆ. ಅವಳ ಶಾಲೆಯಲ್ಲಿ ತನ್ನ ಸೋದರ ಸಂಬಂಧಿಯ ಶಾಲೆಗಿಂತ 178 ಮಕ್ಕಳು ಕಡಿಮೆ ಇದ್ದಾರೆ. ಪ್ರೀತಿಯ ಸೋದರ ಸಂಬಂಧಿಯ ಶಾಲೆಯಲ್ಲಿ ಎಷ್ಟು ಮಕ್ಕಳು ಕಲಿಯುತ್ತಾರೆ?


ಇದನ್ನು ಕಳೆಯಿರಿ

ದಾರಿ ಮಧ್ಯದಲ್ಲಿ ಬಸ್‌ಗಳು ತಿಂಡಿಗಾಗಿ ನಿಲ್ಲಿಸಿದವು. 83 ಮಕ್ಕಳು ಪಾಸಾ ತಂದರು. 46 ಮಕ್ಕಳು ಹಣ್ಣಿನ ತಟ್ಟೆಗಳನ್ನು ತಂದರು. ಇನ್ನೂ ಎಷ್ಟು ಮಕ್ಕಳು ಪಾಸಾ ತಂದರು?

ಪಾಸಾ ತಂದ ಮಕ್ಕಳು ಮತ್ತು ಹಣ್ಣಿನ ತಟ್ಟೆಗಳನ್ನು ತಂದ ಮಕ್ಕಳ ವ್ಯತ್ಯಾಸ 83 – 46.

ವ್ಯತ್ಯಾಸವನ್ನು ಅಂದಾಜಿಸಿ

_____



3 ಹತ್ತು + 7 ಒಂದು = 37


	ಹತ್ತು	ಒಂದು
	7	13
	~~8~~	~~3~~
−	4	6
	3	7

ಹಣ್ಣಿನ ತಟ್ಟೆ ತಂದ ಮಕ್ಕಳಿಗಿಂತ 37 ಹೆಚ್ಚು ಮಕ್ಕಳು ಪಾಸಾ ತಂದರು.

ಕಾಯುತ್ತಿರುವ ಮಕ್ಕಳ ಸಂಖ್ಯೆಯನ್ನು ಅಂದಾಜಿಸಿ.

ಎಲ್ಲಾ 438 ಮಂದಿ ಮಾಪ್ಲಿನ್ನಾಂಗ್ ಗ್ರಾಮದಲ್ಲಿ ಪ್ರಸಿದ್ಧವಾದ ಜೀವಂತ ಬೇರುಗಳಿರುವ ಸೇತುವೆ (Living Roots Bridge) ಗೆ ಭೇಟಿ ನೀಡಲು ನಿರ್ಧರಿಸಿದರು. ಮೊದಲು 215 ಮಕ್ಕಳು ಜೀವಂತ ಬೇರಿನ ಸೇತುವೆಯನ್ನು ನೋಡಲು ಹೋದರು. ಎಷ್ಟು ಮಕ್ಕಳು ಜೀವಂತ ಬೇರಿನ ಸೇತುವೆಗೆ ಭೇಟಿ ನೀಡಲು ಕಾಯುತ್ತಿದ್ದಾರೆ?

ಕಾಯುತ್ತಿರುವ ಮಕ್ಕಳ ಸಂಖ್ಯೆ = 438–215.



2 ನೂರು + 2 ಹತ್ತು + 3 ಒಂದು = 223

	ನೂರು	ಹತ್ತು	ಒಂದು
	4	3	8
	2	1	5
−	2	2	3

223 ಮಕ್ಕಳು ಕಾಯುತ್ತಿದ್ದಾರೆ.

ಲೂ ಮತ್ತು ಡೈಸಿ ಒಟ್ಟು ₹ 310 ತಂದಿದ್ದಾರೆ. ಆಹಾರ ಮತ್ತು ಕೆಲವು ಗಿಫ್ಟ್‌ಗಳಿಗೆ ಖರ್ಚು ಮಾಡಿದ ನಂತರ ಅವರಲ್ಲಿ ₹ 179 ಉಳಿದಿದೆ. ಇದುವರೆಗೆ ಅವರು ಎಷ್ಟು ಹಣ ಖರ್ಚು ಮಾಡಿದ್ದಾರೆ?


ಉತ್ತರವನ್ನು ಅಂದಾಜಿಸಿ.

_____

ವೆಚ್ಚ ಮಾಡಿದ ಹಣ = 310–179.

© KTBS NOT TO BE REPUBLISHED

310




1 ನೂರು + 3 ಹತ್ತು + 1 ಒಂದು = 131

ಆದ್ದರಿಂದ, ಅವರು ₹ 131 ಖರ್ಚು ಮಾಡಿದ್ದಾರೆ.

	ನೂರು	ಹತ್ತು	ಒಂದು
	2	10	10
	3	1	0
−	1	7	9
	1	3	1

@KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ: ಅಲ್ಗಾರಿಥಂ ಮಾಡುವ ಮುಂಚೆ ಮಕ್ಕಳು ಮೂರ್ತ ಸ್ವರೂಪದ ವಸ್ತುಗಳನ್ನು ಬಳಸಬಹುದು. ಅಲ್ಗಾರಿಥಂ ಉಪಯೋಗಿಸಿಕೊಂಡು, ಲೆಕ್ಕಗಳನ್ನು ಮಾಡುವಾಗ ನಾವು ಬಿಡಿ ಸ್ಥಾನಗಳಿಂದ ಆರಂಭಿಸಿ ನಂತರ ಮುಂದಕ್ಕೆ ಹತ್ತುಗಳು, ನೂರುಗಳು ಹೀಗೆ ಮುಂದುವರೆಯುತ್ತೇವೆ ಎಂಬುದನ್ನು ನೀವು ತಿಳಿಸಬೇಕು. ಕಳೆಯಲು ಸಾಕಷ್ಟು ಬಿಡಿಗಳು ಇಲ್ಲದಿದ್ದಾಗ, ನಾವು 1 ಹತ್ತನ್ನು 10 ಬಿಡಿಗಳಾಗಿ ಗುಂಪು ಮಾಡಬೇಕಾಗುತ್ತದೆ. ಹೀಗೆಯೇ ಕಳೆಯಲು ಹತ್ತುಗಳು ಇಲ್ಲದಿದ್ದಾಗ, ನಾವು 1 ನೂರನ್ನು 10 ಹತ್ತುಗಳಾಗಿ ಮರುಗುಂಪು ಮಾಡುತ್ತೇವೆ.




ನಾವು ಬಿಡಿಸೋಣ

ರಾಮ್ ಚಾಚಾ ಕಳೆದ ವರ್ಷ ತಮ್ಮ ಮಾವಿನ ಮರದಿಂದ 264 ಹಣ್ಣುಗಳನ್ನು ಪಡೆದರು. ಈ ವರ್ಷ ಅವರಿಗೆ 527 ಮಾವಿನ ಹಣ್ಣುಗಳು ದೊರೆತವು. ಈ ವರ್ಷ ಅವರು ಎಷ್ಟು ಹೆಚ್ಚು ಮಾವಿನ ಹಣ್ಣುಗಳನ್ನು ಪಡೆದಿದ್ದಾರೆ?

ಉತ್ತರವನ್ನು ಅಂದಾಜಿಸಿ
_____

ಅಗತ್ಯವಾದಲ್ಲಿ, ಮೇಲಿನ ಸಮಸ್ಯೆಗೆ
ಟೋಕನ್‌ಗಳನ್ನು ಉಪಯೋಗಿಸಿ / ರಚಿಸಿ




4. ಗೊಂಬೆಗಳ ಹಬ್ಬದ ಸಮಯದಲ್ಲಿ (ದಸರಾ ಸಮಯದಲ್ಲಿನ ಗೊಂಬೆ ಹಬ್ಬ) ರಂಗಣ್ಣ 639 ಗೊಂಬೆಗಳನ್ನು ಮಾಡಿದರು. ಅವರಿಗೆ 531 ಗೊಂಬೆಗಳನ್ನು ಮಾರಲು ಸಾಧ್ಯವಾಯಿತು. ಅವರಲ್ಲಿ ಇನ್ನೂ ಎಷ್ಟು ಗೊಂಬೆಗಳು ಉಳಿದಿವೆ?

ಉಳಿದ ಗೊಂಬೆಗಳ ಸಂಖ್ಯೆ = _____

ಉತ್ತರವನ್ನು
ಅಂದಾಜಿಸಿ
_____

ಅಗತ್ಯವಾದಲ್ಲಿ, ಮೇಲಿನ ಸಮಸ್ಯೆಗೆ ಟೋಕನ್‌ಗಳನ್ನು
ಉಪಯೋಗಿಸಿ / ರಚಿಸಿ



© KTBS NOT TO BE REPUBLISHED

5. ನಿಮ್ಮ ನೋಟ್‌ಪುಸ್ತಕದಲ್ಲಿ ಸಂಖ್ಯೆಗಳನ್ನು ಕಂಬಸಾಲಿನಲ್ಲಿ ಜೋಡಿಸಿ ನಂತರ ಕಳೆಯಿರಿ.

a) 83 – 29

b) 345 – 123

c) 763 – 437

d) 803 – 350

e) 900 – 328

ನಾವು ಬಿಡಿಸೋಣ

1. ಇವು ವಕಂಡಾ ಗ್ರಾಮದಲ್ಲಿನ ಸಮುದಾಯ ಗ್ರಂಥಾಲಯಲ್ಲಿನ ಪುಸ್ತಕಗಳಾಗಿವೆ. ಮಕ್ಕಳು ತಮ್ಮ ರಜಾ ಕಾಲದಲ್ಲಿ ಈ ಪುಸ್ತಕಗಳನ್ನು ಓದಲು ತಂದರು.

ಪುಸ್ತಕದ ಹೆಸರು	ಪುಸ್ತಕದ ಪುಟಗಳು
 ಸ್ವಾಮಿ ಮತ್ತು ಸ್ನೇಹಿತರು	179
 ಪಂಚತಂತ್ರ ಕಥೆಗಳು	236
 ಕರಡಿ ಕಥೆಗಳು	30
 ಅಕ್ಬರ್ ಬೀರ್ಬಲ್	96
 ನೀಲಿ ಛತ್ರಿ	90
 ಫೆಲುದಾ ಸಾಹಸಗಳು	128


@KTBS NOT TO BE REPUBLISHED

a) ಬೇಸಿಗೆ ರಜೆಯಲ್ಲಿ ರಾಮಿ *ಪಂಚತಂತ್ರ ಕಥೆಗಳನ್ನು* ಓದಿದನು. ಕೆಸು ಅಕ್ಬರ್ ಬೀರ್ಬಲ್, ಕರಡಿ ಕಥೆಗಳು ಮತ್ತು ನೀಲಿ ಕೊಡೆ ಕಥೆಗಳನ್ನು ಓದಿದನು. ಯಾರು ಹೆಚ್ಚು ಓದಿದ್ದಾರೆಂದು ನೀವು ಭಾವಿಸುವಿರಿ? ಎಷ್ಟು ಹೆಚ್ಚು ಪುಟಗಳನ್ನು ಓದಿದ್ದಾರೆ?

b) ಸುಮಿ *ಫೆಲುದಾ ಸಾಹಸಗಳ* ಪುಸ್ತಕದ 23 ಪುಟಗಳನ್ನು ಓದಿದ್ದಾಳೆ. ಪುಸ್ತಕವನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಪುಟಗಳು ಉಳಿದಿವೆ?

c) ಜಗ್ಗು ರಜಾ ಅವಧಿಯಲ್ಲಿ ಇಲ್ಲಿ ಪಟ್ಟಿ ಮಾಡಿರುವ ಎಲ್ಲಾ ಪುಸ್ತಕಗಳನ್ನು ಓದಲು ನಿರ್ಧರಿಸುತ್ತಾನೆ. ಅವನು ಸ್ವಾಮಿ ಮತ್ತು ಸ್ನೇಹಿತರು, ಅಕ್ಬರ್ ಬೀರ್ಬಲ್ ಮತ್ತು ಫೆಲುದಾದ 50 ಪುಟಗಳನ್ನು ಓದಿ ಮುಗಿಸಿದ್ದಾನೆ. ಎಲ್ಲಾ ಪುಸ್ತಕಗಳನ್ನು ಓದಿ ಮುಗಿಸಲು ಇನ್ನೂ ಎಷ್ಟು ಪುಟಗಳನ್ನು ಅವನು ಓದಬೇಕು?

2. ದೆಹಲಿ ಮತ್ತು ಅಲಿಗರ್ ನಡುವೆ ಪ್ರತಿ ದಿನ ಸಂಚರಿಸುವ ರೈಲು 131 km ಕ್ರಮಿಸುತ್ತದೆ. ಮುಂದಿನ ಚಿತ್ರವನ್ನು ಗಮನಿಸಿ, ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.



@KTBS NOT TO BE REPUBLISHED

a) ರೈಲು ದಾದ್ರಿ ಬಿಟ್ಟಾಗ ಅದರಲ್ಲಿ ಎಷ್ಟು ಮಂದಿ ಪ್ರಯಾಣಿಕರಿದ್ದರು? _____

b) ಅಲಿಗರ್‌ನಲ್ಲಿ ರೈಲಿನಿಂದ ಇಳಿದ ಜನರ ಸಂಖ್ಯೆಯನ್ನು ಕಂಡುಹಿಡಿಯಿರಿ.

c) ರೈಲಿನಲ್ಲಿ ದೆಹಲಿ ಅಥವಾ ಅಲಿಗರ್ – ಎಲ್ಲಿ ಹೆಚ್ಚು ಜನರು ಇದ್ದರು? ಎಷ್ಟು ಹೆಚ್ಚು / ಕಡಿಮೆ ಇದ್ದರು? _____

d) ಒಟ್ಟು ಎಷ್ಟು ಜನರು ರೈಲಿನಲ್ಲಿ ಪ್ರಯಾಣಿಸಿದರು? _____

ನಾವು ಬಿಡಿಸೋಣ

a.

ನೂರು	ಹತ್ತು	ಒಂದು
4	5	2
+	8	9

b.

ನೂರು	ಹತ್ತು	ಒಂದು
6	4	1
– 2	7	3

c. ಶೀಘ್ರವಾಗಿ ಬಿಡಿಸುವ ವಿಧಾನಗಳನ್ನು ಕಂಡುಹಿಡಿಯಿರಿ. ನೀವು 3 ನೇ ತರಗತಿಯಲ್ಲಿ ಕಲಿತಿರುವ ಕೆಲವು ಮಾರ್ಗೋಪಾಯಗಳ ಬಗ್ಗೆ ಯೋಚಿಸಿ.

d. ನಿಮ್ಮ ನೋಟ್ ಪುಸ್ತಕದಲ್ಲಿ ಸಂಖ್ಯೆಗಳನ್ನು ಕಂಬಸಾಲುಗಳಲ್ಲಿ ಜೋಡಿಸಿ, ನಂತರ ಸಮಸ್ಯೆಗಳನ್ನು ಬಿಡಿಸಿ.

326 + 25 = _____

675 + 5 = _____

410 – 12 = _____

204 – 10 = _____



ಇದರ ಬಗ್ಗೆ ನಾನು ಹೀಗೆ ಯೋಚಿಸಬಹುದು: 400–10, ಇದು 400 ಮತ್ತು 400 ಕ್ಕಿಂತ 2 ಕಡಿಮೆ ಅಂದರೆ 398.

811 + 99 = _____

945 – 19 = _____

1. 38 + 943
2. 465 + 305
3. 435 + 462
4. 764 – 657
5. 518 – 209
6. 879 – 53

©KTBS NOT TO BE REPUBLISHED

e. ಮೊತ್ತ 856 ಆಗುವಂತೆ ಎರಡು ಸಂಖ್ಯೆಗಳನ್ನು ಕಂಡುಹಿಡಿಯಿರಿ. ವ್ಯತ್ಯಾಸ 563 ಆಗುವಂತೆ ಮತ್ತೆರಡು ಸಂಖ್ಯೆಗಳನ್ನು ಕಂಡುಹಿಡಿಯಿರಿ. ಈ ಸಂಖ್ಯೆಗಳಿಂದ ನಿಮ್ಮದೇ ವಾಕ್ಯ ರೂಪದ ಸಮಸ್ಯೆಗಳನ್ನು ಮಾಡಿ.



856 = ☐ + ☐

_____

_____

_____



563 = ☐ − ☐

_____

_____

_____

©KTBS NOT TO BE REPUBLISHED

ಸಂಖ್ಯಾ ಜೋಡಿಯನ್ನು ಹುಡುಕುವುದು

ಸಂಖ್ಯೆಗಳ ಒಂದು ಗ್ರಿಡ್ ಇಲ್ಲಿದೆ. ಈ ಗ್ರಿಡ್‌ನಲ್ಲಿ ಸಂಖ್ಯೆಗಳ ಬಹಳಷ್ಟು ಜೋಡಿಗಳಿವೆ. ಒಂದು ಸಂಖ್ಯಾ ಜೋಡಿಯಲ್ಲಿ 2 ಸಂಖ್ಯೆಗಳಿದ್ದು ಅವುಗಳು ಅಕ್ಕಪಕ್ಕದಲ್ಲಿ, ಲಂಬವಾಗಿ ಅಥವಾ ಅಡ್ಡಲಾಗಿ ಇರುತ್ತದೆ. ಉದಾಹರಣೆಗೆ, 111 ಮತ್ತು 185 ಎರಡು ಸಂಖ್ಯಾ ಜೋಡಿಗಳು, 48 ಮತ್ತು 185 ಈ ಗ್ರಿಡ್‌ನಲ್ಲಿನ ಸಂಖ್ಯಾ ಜೋಡಿಗಳು.

ಯಾವ ಸಂಖ್ಯಾ ಜೋಡಿಗಳ ಮೊತ್ತ ಅಥವಾ ವ್ಯತ್ಯಾಸ ಗರಿಷ್ಠ ಎಂಬುದನ್ನು ಕಂಡುಹಿಡಿಯಲು ನಾವು ಪ್ರತಿ ಸಂಖ್ಯಾ ಜೋಡಿಯನ್ನು ಪರಿಶೀಲಿಸಬೇಕೆ?

35	100	179	68
111	185	143	54
300	48	225	190
54	321	63	167

ಈ ಗ್ರಿಡ್‌ನಲ್ಲಿ ಎಷ್ಟು ಸಂಖ್ಯಾ ಜೋಡಿಗಳಿವೆ?

1. ಮೊತ್ತ ಅತಿ ಹೆಚ್ಚಾಗಿರುವ ಸಂಖ್ಯಾ ಜೋಡಿಯನ್ನು ಕಂಡುಹಿಡಿಯಿರಿ.
_____

2. ವ್ಯತ್ಯಾಸ ಅತಿ ಕಡಿಮೆ ಇರುವ ಸಂಖ್ಯಾ ಜೋಡಿಯನ್ನು ಕಂಡುಹಿಡಿಯಿರಿ.
_____

3. ವ್ಯತ್ಯಾಸ ಅತಿ ಹೆಚ್ಚಾಗಿರುವ ಸಂಖ್ಯಾ ಜೋಡಿಯನ್ನು ಕಂಡುಹಿಡಿಯಿರಿ.

_____

4. ವ್ಯತ್ಯಾಸ ಅತಿ ಕಡಿಮೆಯಿರುವ ಸಂಖ್ಯಾ ಜೋಡಿಯನ್ನು ಕಂಡುಹಿಡಿಯಿರಿ.

_____

ಬಿಟ್ಟು ಹೋಗಿರುವ ಅಂಕಿಗಳು

ಮುಂದಿನ ಪ್ರತಿಯೊಂದರಲ್ಲೂ ಕೊಟ್ಟಿರುವ ಮೊತ್ತಕ್ಕೆ ಸರಿಯಾಗುವಂತೆ ಬಿಟ್ಟು ಹೋಗಿರುವ ಅಂಕಿಗಳನ್ನು ಕಂಡುಹಿಡಿಯಿರಿ.

□ 6	1 □	3 □ 2
+ 1 □	+ 2 □	+ □ 8 8
5 0	3 8	8 9 0
7 □	6 5	4 7 □
− 4 □	− □ □	− 1 4 □
2 7	2 5	□ 2 7

ನಾವು ಮಾಡೋಣ

1. ಕೂಡಿ.

a) 23 + 489

b) 105 + 295

c) 630 + 56

d) 35 + 99

e) 409 + 387

f) 67 + 76

g) 580 + 207

h) 333 + 666

i) 826 + 268

2. ಕಳೆಯಿರಿ.

a) 300 – 45

b) 962 – 268

c) 706 – 209

d) 842 – 387

e) 674 – 76

f) 754 – 409

g) 403 – 245

h) 600 – 384

i) 546 – 538


@KTBS NOT TO BE REPUBLISHED

ಶಿಕ್ಷಕರಿಗೆ ಟಿಪ್ಪಣಿ

ಬಾಕ್ಸ್ ಚಿತ್ರಗಳು ವಿದ್ಯಾರ್ಥಿಗಳಿಗೆ ಪದ ರೂಪದ ಸಮಸ್ಯೆಗಳನ್ನು ತಿಳಿಯಲು ಹಾಗೂ ಅವುಗಳನ್ನು ಬಿಡಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಉಪಯುಕ್ತವಾಗಿವೆ. ಸಂಕಲನ ಮತ್ತು ವ್ಯವಕಲನದ ಪದ ಸಮಸ್ಯೆಗಳಿಗೆ ಮುಂದಿನವುಗಳು ಮಾದರಿ ಉದಾಹರಣೆಗಳಾಗಿವೆ. ಯಾವುದೇ ಸಮಸ್ಯೆಯಲ್ಲಿ ಬಾಕ್ಸ್‌ಗಳಲ್ಲಿ ತುಂಬಬಹುದಾದ ಅಂಶಗಳನ್ನು ಆಧರಿಸಿ, ನಡೆಸಬೇಕಾದ ಕ್ರಿಯೆಯನ್ನು ನಿರ್ಧರಿಸಲಾಗುತ್ತದೆ. ಮೂರು ವಿಧದ ಸಮಸ್ಯೆಗಳೆಂದರೆ ಸಂಯೋಜನೆ, ಹೋಲಿಕೆ ಮತ್ತು ಬದಲಿಸುವಿಕೆ. ಪ್ರತಿ ಸಮಸ್ಯೆಯನ್ನು ಅಲ್ಪಸ್ವಲ್ಪ ವ್ಯತ್ಯಾಸವಿರುವ ಬೇರೆ ಬೇರೆ ಬಾಕ್ಸ್‌ಗಳ ಚಿತ್ರಗಳನ್ನು ಉಪಯೋಗಿಸಿ ಪ್ರತಿನಿಧಿಸಬಹುದು, ಇದರಿಂದ ಸಮಸ್ಯೆಯನ್ನು ಪೂರ್ಣವಾಗಿ ಗ್ರಹಿಸಲು ಸಾಧ್ಯವಾಗುತ್ತದೆ.

ಉದಾಹರಣೆ 1: ಸಂಯೋಜನೆ: ಎರಡು ಬೇರೆ ಬೇರೆ ಗುಂಪುಗಳು / ಸಂಗ್ರಹಗಳನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ಒಂದು ಶಾಲೆಯಲ್ಲಿ ಪ್ರಾಥಮಿಕ ಹಂತದಲ್ಲಿ 343 ಮಕ್ಕಳಿದ್ದಾರೆ, ಮಾಧ್ಯಮಿಕ ಹಂತದಲ್ಲಿ 523 ಮಕ್ಕಳಿದ್ದಾರೆ. ಎರಡೂ ಹಂತಗಳಲ್ಲಿ ಒಟ್ಟು ಎಷ್ಟು ಮಕ್ಕಳಿದ್ದಾರೆ?

343 + 532 = ?




© TSBSE NOT TO BE REPUBLISHED

ಉದಾಹರಣೆ 2: ಬದಲಾಯಿಸು: ಇರುವ ಗುಂಪು / ಪ್ರಮಾಣದಲ್ಲಿನ ಬದಲಾವಣೆಯನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ನನ್ನ ಪಿಗ್ಗಿ ಬ್ಯಾಂಕ್‌ನಲ್ಲಿ 445 ಇದೆ. ಮೂರು ತಿಂಗಳ ನಂತರ ಬ್ಯಾಂಕ್‌ನಲ್ಲಿ 800 ಇರುತ್ತದೆ. ಮೂರು ತಿಂಗಳಲ್ಲಿ ಎಷ್ಟು ಹಣ ನನ್ನ ಬ್ಯಾಂಕ್‌ನಲ್ಲಿ ಹೆಚ್ಚಾಗಿದೆ?

445 + ? = 800


800 – 445 = ?



ಉದಾಹರಣೆ 3: ಬದಲಾಯಿಸು: ಸೋಹನ್ ಅಂಗಡಿಯಲ್ಲಿ ಆಲೂಗಡ್ಡೆಗಳಿವೆ. ಅವರು ಇನ್ನೂ 150 kg ತಂದರು, ಇದರಿಂದಾಗಿ ಅವರಲ್ಲಿ 500 kg ತಾಜ ಮತ್ತು ಹಳೆಯ ಆಲೂಗಡ್ಡೆಗಳಿವೆ. ಆರಂಭದಲ್ಲಿ ಅವರಲ್ಲಿ ಎಷ್ಟು ಆಲೂಗಡ್ಡೆ ಇತ್ತು?


? + 150 = 500

500 – 150 = ?




ಉದಾಹರಣೆ 4: ಹೋಲಿಸು: ಎರಡು ಪರಿಮಾಣಗಳನ್ನು ಹೋಲಿಸುವುದನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ಅನು, ಅವಳ ಸಹೋದರಿ ಮಿನಿಗಿಂತ 6 ವರ್ಷ ದೊಡ್ಡವಳು. ಅನು ವಯಸ್ಸು ಈಗ 8 ವರ್ಷಗಳು. ಮಿನಿಯ ವಯಸ್ಸು ಎಷ್ಟು?

8 = ? + 6




2 ಆಯಾಮದ ಆಕೃತಿಗಳು

ಗಮನಿಸಿ: ಮುಂದೆ ನೀಡಿರುವ ಆಕೃತಿಗಳನ್ನು ಅಧ್ಯಾಯ 1 ರಲ್ಲಿ ಉಪಯೋಗಿಸಿ.



ಡೀನ್ ಬ್ಲಾಕ್‌ಗಳು




@KTBS NOT TO BE REPUBLISHED

ಗಮನಿಸಿ: ಅಗತ್ಯವಿದ್ದಲ್ಲಿ ಎನ್ನೂ ಹೆಚ್ಚಿನ ಡೀನ್ ಬ್ಲಾಕ್‌ಗಳನ್ನು ಮಾಡಿ.


@KTBS
NOT TO BE REPUBLISHED

ಭಿನ್ನರಾಶಿ ಚಿಹ್ನೆ



@KTBS
NOT TO BE REPUBLISHED

ಅಳತೆಪಟ್ಟಿ




@KTBS
NOT TO BE REPUBLISHED


ತಿಭುಜ ಪಟ್ಟಕ ಮತ್ತು ಆಯತ ಪಟ್ಟಕ ಆಯತ ಘನದ ಜಾಲಗಳು

ಗಮನಿಸಿ: ಚುಕ್ಕೆಗಳಿರುವ ಗೆರೆಯ ಉದ್ದಕ್ಕೂ ಕತ್ತರಿಸಿ ಮತ್ತು ದಪ್ಪ ಗೆರೆಗಳ ಉದ್ದಕ್ಕೂ ಮಡಚಿ.

ತ್ರಿಕೋನ ಪಟ್ಟಕ



@KTBS
NOT TO BE REPUBLISHED



ಆಯತಾಕಾರದ ಪಟ್ಟಕ / ಆಯತ ಘನ

@KTBS
NOT TO BE REPUBLISHED